School Leadership

TESS India

# Transforming teaching-learning process: leading the use of technology in your school

## ಬೋಧನಾ-ಕಲಿಕಾ ಪ್ರಕ್ರಿಯೆನ್ನು ಪರಿವರ್ತಿಸುವುದು: ಶಾಲೆಯಲ್ಲಿ

## ತಂತ್ರಜ್ಞಾನದ ಬಳಕೆಯ ಮುಂದಾಳತ್ವವಹಿಸುವುದು





Teacher Education through School-based Support in India
www.TESS-India.edu.in

The Open University

UKaid from the British people

http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ (Open Educational Resource-OER)** ಶಾಲೆಯಲ್ಲಿ ಭೋದನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್–ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿಧ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು (National School leadership Curriculum Framework-India)** ಗುರುತಿಸಿರುವ ಶಾಲಾ ನಾಯಕತ್ವದ ಯಥಾರ್ಥದರ್ಶನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಭೋದನೆ–ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)– ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಭೋದನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್–ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಭೋದನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಫೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್–ಇಂಡಿಯಾ (Teacher Education through School based Support) ಯೋಜನೆಯ ಬಗ್ಗೆ**

ವಿದ್ಯಾರ್ಥಿ–ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್–ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್–ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್–ಇಂಡಿಯಾ** ರೂಪುಗೊಂಡಿದೆ.

*Version 2.0 SL20v1*
*. D U Q D W D N D*

*Except for third party materials and othe errwwise stated, this content is made available unde err a Creative Commons Attribution-ShareAlike licence: http://creaattivecommons.org/licenses/by-sa/3.0/*

7(66 ,QGLD LV OHG E\ 7KH 2SHQ 8QLYHUVLW\ 8. DQG IXQGHG E\ 8. DLG IUR

# ಈ ಘಟಕದಲ್ಲೇನಿದೆ?

'ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಮಕ್ಕಳು, ಶಿಕ್ಷಕರು, ಪ್ರಶಿಕ್ಷಕರು ಮತ್ತು ಇತರರ ಮೇಲೆ ಅಗಾಧವಾದ ಪ್ರಭಾವ ಬೀರಿರುವುದನ್ನು ನಿರಾಯಾಸವಾಗಿ ಒಪ್ಪಿಕೊಳ್ಳಲಾಗಿದೆ. ನಮ್ಮ ದೇಶವು ಎದುರಿಸುತ್ತಿರುವ ಶೈಕ್ಷಣಿಕ ವ್ಯವಸ್ಥೆಯಲ್ಲಿನ ಕೆಲವೊಂದು ಸವಾಲುಗಳನ್ನು ಉಪಶಮನ ಮಾಡುವಲ್ಲಿ ಇದು ನವೀನ ಹಾಗೂ ಪರಿನಾಮಕಾರಿ ಮಾರ್ಗಗಳನ್ನು ಒದಗಿಸಿದೆ..

(ಶೈಕ್ಷಣಿಕ ತಂತ್ರಜ್ಞಾನದ ಕೇಂದ್ರೀಯ ಸಂಸ್ಥೆ)

ಅನೇಕ ಶಾಲೆಗಳಲ್ಲಿ ಶಾಲಾ ನಾಯಕರು ತಮ್ಮ ಶಾಲೆಗಳಲ್ಲಿ ಮಕ್ಕಳ ಕಲಿಕೆಗೆ ನೆರವಾಗುವಂತೆ ಕಂಪ್ಯೂಟರ್ ಗಳು ಲಭ್ಯವಿರಬೇಕೆಂದು ಇಚ್ಚಿಸುತ್ತಾರೆ. ಕೆಲವರು ಕಂಪ್ಯೂಟರ್ ಬಗ್ಗೆ ತಿಳಿದಿರುತ್ತಾರೆ ಆದರೆ ಸ್ವಯಂ ಬಳಸಿರುವುದಿಲ್ಲ. ನಿಮ್ಮ ಶಾಲೆಯಲ್ಲಿ ಕಂಪ್ಯೂಟರ್ ಲಭ್ಯವಿಲ್ಲದಿದ್ದರೂ ಕೂಡ ಲಭ್ಯ ತಂತ್ರಜ್ಞಾನವನ್ನು ಸೂಕ್ತವಾಗಿ ಬಳಸಿಕೊಳ್ಳುವಲ್ಲಿ ನಿಮಗೆ ಸಹಾಯ ಮಾಡುವುದೇ ಈ ಘಟಕದ ಉದ್ದೇಶ. ಶಿಕ್ಷಕರು ಸೂಕ್ತ ಕೌಶಲದಿಂದ ಲಭ್ಯ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಪ್ರೇರೇಪಿಸುವುದೇ ಇಲ್ಲಿನ ಪ್ರಮುಖ ಗುರಿಯಾಗಿದೆ. ಒಬ್ಬ ಶಾಲಾ ನಾಯಕರಾಗಿ ನೀವು ತಾಂತ್ರಿಕತೆಯಲ್ಲಿ ತಜ್ಞರಾಗಬೇಕೆಂದೇನಿಲ್ಲ. (ಮೂಲ ಕೌಶಲಗಳನ್ನು ಬೆಳೆಸಿಕೊಳ್ಳುವುದರಿಂದ ನಿಮಗೆ ಲಾಬವಾಗುವುದು). ಆದೆ ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ICT ಯು(Information and Communication Technology-ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ) ನೆರವಾಗುವಂತೆ ಒಂದು ದೂರದೃಷ್ಟಿತ್ವವನ್ನು ನೀವು ಶಿಕ್ಷಕರಿಗೆ ಒದಗಿಸಬೇಕು. ಮತ್ತು ಶಿಕ್ಷಕರು ಈ ಸಾಮರ್ಥ್ಯವನ್ನು ತಮ್ಮದಾಗಿಸಿಕೊಳ್ಳುವಂತೆ ಒಂದು ವಾತಾವರಣವನ್ನು ನೀವು ನಿರ್ಮಾಣ ಮಾಡಬೇಕು.

ತಂತ್ರಜ್ಞಾನದ ಉಪಯುಕ್ತತೆ ಮತ್ತು ಮಕ್ಕಳ ಕಲಿಕೆಗೆ ತಂತ್ರಜ್ಞಾನವು ಹೇಗೆ ನೆರವು .ನೀಡುವುದು ಎನ್ನುವ ಕೆಲವು ಪ್ರಮುಖ ಅಂಶಗಳನ್ನು ಈ ಘಟಕದಲ್ಲಿ ಚರ್ಚಿಸಲಾಗಿದೆ. ಕಲಿಕೆಗೆ ಬೆಂಬಲ ನೀಡುವಂತೆ ICTಯನ್ನು ಶಿಕ್ಷಕರು ಬಳಸಲು ಕೆಲವು ಬೋಧನಾ ಕೌಶಲಗಳನ್ನು ಶಿಕ್ಷಕರಲ್ಲಿ ಅಪೇಕ್ಷಿಸಲಾಗಿದೆ. ಜ್ಞಾನದ ಅನೇಕ ಮೂಲಗಳಿಗೆ ಅಂತರ್ಜಾಲಗಳು ಮತ್ತು ಸಾಮಾಜಿಕ ಜಾಲತಾಣಗಳು ಬಹಳಷ್ಟು ಮಾರ್ಗಗಳನ್ನು ಒದಗಿಸುವುದು. ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವೆ ನೂತನ ಬಾಂಧವ್ಯವನ್ನು ಇದು ನಿರ್ಮಿಸುವುದು. ಈ ಗಿನ ಸಮಾಜದಲ್ಲಿ ತಂತ್ರಜ್ಞಾನವು ಬಹಳ ವೇಗವಾಗಿ ಬದಲಾಗುತ್ತಿದೆ. ಕಂಪ್ಯೂಟರ್ ಬಗ್ಗೆ ಯುವ ಮತ್ತು ಅನನುಭವಿ ಶಿಕ್ಷಕರುಗಳಿಗೆ ಸಾಮಾನ್ಯವಾಗಿ ಹಳೆಯ ಶಿಕ್ಷಕರಿಗಿಂತ ಹೆಚ್ಚಿನ ಕೌಶಲವಿರುವುದು. ಹಾಗೂ ಸುತ್ತಮುತ್ತಲಿನ ಬದಲಾವಣೆಗಳತ್ತ ಗಮನ ಹರಿಸಲು ಇವರು ತಮ್ಮನ್ನು ಉತ್ತಮ ಸ್ಥಾನದಲ್ಲಿರಿಸಿಕೊಂಡಿರುವರು. ಹಳೆಯ ಶಿಕ್ಷಕರು ಕೆಲವೊಮ್ಮೆ ಭಯಪಡಬಹುದು. ಆದರೆ ಈ ಶಿಕ್ಷಕರನ್ನು ಪ್ರೋತ್ಸಾಹಿಸಿ ಸಹವರ್ತಿ ಗುಂಪಿನಲ್ಲಿ ಪರಸ್ಪರರಿಂದ ಕಲಿಯುವ ವಾತಾವರಣವನ್ನು ನಿರ್ಮಿಸುವುದು ನಿಮ್ಮ ಕೈಯ್ಯಲ್ಲಿರುವುದು. ನಿಮ್ಮ ಶಾಲೆಯಲ್ಲಿ ಕಲಿಕೆಯನ್ನು ಬೆಂಬಲಿಸಲು ತಂತ್ರಜ್ಞಾನವನ್ನು ಪರಿನಣಾಮಕಾರಿಯಾಗಿ ಹೇಗೆ ಬಳಸಬೇಕೆಂಬುದು ಈ ಘಟಕದ ಕೇಂದ್ರಬಿಂದುವೆನ್ನುವುದನ್ನು ನೀವು ಇಲ್ಲಿ ಗಮನಿಸಿ. ತಂತ್ರಜ್ಞಾನವನ್ನು ಒಂದು ವಿಷಯವಾಗಿ ಬೋಧಿಸುವುದು ಿಲ್ಲಿನ ುದ್ದೇಶವಲ್ಲ.

# ಕಲಿಕಾ ದಿನಚರಿ

ಈ ಘಟಕದ ಬಗ್ಗೆ ನೀವು ಚಟುವಟಿಕೆಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ನಿಮ್ಮ ಕಲಿಕಾ ದಿನಚರಿಯಲ್ಲಿ ಅಥವ ಒಂದು ನೋಟ್ ಪುಸ್ತಕದಲ್ಲಿ ಟಿಪ್ಪಣಿಯನ್ನು ಮಾಡಿಕೊಳ್ಳಲು ನಿಮಗೆ ತಿಳಿಸಲಾಗುವುದು. ಈಗಾಗಲೇ ನೀವಿದನ್ನು ಆರಂಭಿಸಿರುವಿರಿ.

ಈ ಘಟಕದ ಮೇಲೆ ನೀವೊಬ್ಬರೇ ಕಾರ್ಯ ನಿರ್ವಹಿಸುತ್ತಿರಬಹುದು ಆದರೆ ಮತ್ತೊಬ್ಬ ಶಾಲಾ ನಾಯಕರೊಂದಿಗೆ ನಿಮ್ಮ ಕಲಿಕಾನುಭವಗಳನ್ನು ಚರ್ಚಿಸುತ್ತಿದ್ದಲ್ಲಿ ನೀವು ಮತ್ತೂ ಹೆಚ್ಚಿನ ಅಂಶಗಳನ್ನು ಕಲಿಯುವಿರಿ. ಇವರು ಈಗಾಗಲೇ ನಿಮ್ಮ ಸಹಯೋಗಿ ತಂಡದ ಒಬ್ಬ

ಸಹೋದ್ಯೋಗಿಯಾಗಿರಬಹುದು ಅಥವ ನವೀನ ಸಂಬಂಧವನ್ನು ಬೆಳೆಸಿಕೊಳ್ಳುವ ಒಬ್ಬ ವ್ಯಕ್ತಿಯಾಗಿರಬಹುದು. ಇದನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಅನೌಪಚಾರಿಕವಾಗಿ ಮಾಡಬಹುದು. ನೀವು ನಿಮ್ಮ ದಿನಚರಿಯಲ್ಲಿ ಬರೆದುಕೊಳ್ಳುವ ಟಿಪ್ಪಣಿಗಳು ಈ ಸಭೆಗಳಲ್ಲಿ ಉಪಯುಕ್ತವಾಗುವುದು ಹಾಗೂ ದೀರ್ಘಾವಧಿಯ ಕಲಿಕೆ ಮತ್ತು ಅಭಿವೃದ್ಧಿಯ ಪಥವನ್ನು ಗುರುತಿಸಲೂ ಕೂಡ ನೆರವಾಗುವುದು.

# ಈ ಘಟಕದಲ್ಲಿ ಶಾಲಾ ನಾಯಕರು ಏನನ್ನು ಕಲಿಯುವರು

- ನಿಮ್ಮ ಶಾಲೆಯಲ್ಲಿ ಬಳಸಲ್ಪಡುವ ತ್ಂತ್ರಜ್ಞಾನದ ವ್ಯಾಪ್ತಿಯ ೊಂದು ಒಳನೋಟ
- ಶಾಲೆಯಲ್ಲಿನ ICT ಸಾಧನ ಮತ್ತು ಸಲಕರಣೆಗಳ ಸೃಜನಶೀಲ ಬಳಕೆಯ ಬಗ್ಗೆ ಗಮನವಿಡುವುದು
- ನಿಮ್ಮ ಸ್ವಕಲಿಕೆಗೆ ನೆರವಾಗುವಂತೆ ಅಂತರ್ಜಾಲದ ಬಳಕೆಯ ಮಾರ್ಗಗಳು
- ನಿಮ್ಮ ಶಿಕ್ಷಕರು ಅಂತರ್ಜಾಲವನ್ನು ತಮ್ಮ ಸ್ವಕಲಿಕೆಗೆ ಮತ್ತು ತಮ್ಮ ತರಗತಿ ಕೋಣೆಗಳಲ್ಲಿ ಬಳಸುವಂತೆ ಅವರಿಗೆ ಬೆಂಬಲ ನೀಡುವುದು.

# 1 ನಿಮ್ಮ ಬಳಿ ಇರುವ ತಂತ್ರಜ್ಞಾನಗಳು ಮತ್ತು ಕೌಶಲಗಳು ಏನೇನು

## ಗಡಸು ಸಾಧನಗಳು



ಚಿತ್ರ-1 ಗಡಸು ಸಾಧನಗಳು ನಿಮ್ಮ ಶಾಲೆಗೆ ಲಾಭವನ್ನು ತರಬಹುದು

ತಂತ್ರಜ್ಞಾನವು ಕಂಪ್ಯೂಟರ್, ಲ್ಯಾಪ್ ಟಾಪ್, ಮೊಬೈಲ್ ಫೋನ್,ಸ್ಮಾರ್ಟ ಫೋನ್, ಟ್ಯಾಬ್ಲೆಟ್, ಪ್ರೊಜೆಕ್ಟರ್, ಪ್ರಿಂಟರ್, ಸ್ಕ್ಯಾನರ್, ಡಿಜಿಟಲ್ ಕ್ಯಾಮರಾ ಇತ್ಯಾದಿ ದೊಡ್ಡ ಸಾಂಪ್ರದಾಯಿಕ ಪ್ರಮಾಣದ ವಿವಿಧ ಉಪಕರಣಗಳನ್ನು ಒಳಗೊಂಡಿರುವುದು. ಇವುಗಳಲ್ಲಿ ಕೆಲವೊಂದನ್ನು ಸೂಕ್ತ ಸಾಫ್ಟವೇರ್ ನೊಂದಿಗೆ ಉಪಯೋಗಿಸಬಹುದು.ಹಾಗೂ ಕೆಲವನ್ನು ಅಂತರ್ಜಾಲಕ್ಕೆ ಜೋಡಿಸಬಹುದು. ಮುಂಬರುವ ದಿನಗಳಲ್ಲಿ ಫೋನ್ ಗಳು ಟ್ಯಾಬ್ ಲೆಟ್ ಗಳು ಕಂಪ್ಯೂಟರ್ ಗಳಿಗಿಂತಸುಲಭವಾಗಿ ಲಭ್ಯವಾಗುವುದು. ಆದ್ದರಿಂದ ಈ ಬದಲಾವಣೆಗಳಿಗೆ ನಾವು ಹೆಚ್ಚು ಸ್ಪಂಧಿಸಿ ಯೋಜನೆ ರೂಪಿಸಿಕೊಳ್ಳಬೇಕು. ಒಬ್ಬ ಶಾಲಾ ನಾಯಕರಾಗಿ ನೀವು ತಂತ್ರಜ್ಞಾನದಲ್ಲಾಗುತ್ತಿರುವ ಬೆಳವಣಿಗೆಗಳು ಮತ್ತು ಕಲಿಕೆಯ ಮೇಲೆ ಅವು ಬೀರುತ್ತಿರುವ ಪ್ರಬಾವಗಳ ಕುರಿತು ನೀವು ನಿಮ್ಮ ಅರಿವನ್ನು ಹೆಚ್ಚಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ ಶಾಲೆಯಲ್ಲಿ ಈ ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬಹುದು ಎಂಬುವುದರ ಬಗ್ಗೆ ಅವಕಾಶಗಳಿಗಾಗಿ ನೀವು ಎದುರು ನೋಡಬಹುದು.

# ಅಂತರ್ಜಾಲ




ಚಿತ್ರ-2………. ಇದರಿಂದ ಅಂತರ್ಜಾಲವನ್ನು ಪ್ರವೇಶಿಸಬಹುದು.

ಅಂತರ್ಜಾಲವು ಅತಿ ಪ್ರಬಾವಶಾಲಿಯಾದ ಒಂದು ಸಂಪನ್ಮೂಲವಾಗಿದೆ. ಶಾಲೆಗಳಲ್ಲಿ ಅಂತರಜಾಲವನ್ನು ಲಭ್ಯ ಮಾಡುವುದರಿಂದ ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಅವಕಾಶಗಳ ಲಭ್ಯತೆಯಲ್ಲಿ ಭಾರಿ ಬದಲಾವಣೆಯನ್ನು ತರಬಹುದು. ಶಾಲೆಯಲ್ಲಿ ಇಂಟರ್ನೆಟ್ ಲಭ್ಯವಿಲ್ಲದಿದ್ದರೂ ಕೂಡ ಮೆಮೋರಿ ಚಿಪ್ ಗಳನ್ನು ಬೇರೆ ಕಡೆಗಳಿಂದ ಸಾಮಾಗ್ರಿಗಳನ್ನು ಡೌನ್ ಲೋಡ್ ಮಾಡಿಕೊಂಡು ನಂತರ ಅವುಗಳನ್ನು ಆಫ್ ಲೈನ್ ನಲ್ಲಿ ಬಳಸಬಹುದು.

ಪ್ರಸ್ತುತ ಅಂತರ್ಜಾಲ ವ್ಯವಸ್ಥೆಯು ಬಾರತದ ಮಹಾನಗರಗಳಲ್ಲಿ ಹೆಚ್ಚು ವ್ಯಾಪಕವಾಗಿ ಲಭ್ಯವಿದೆ. ಕಾಲಕಾಲಕ್ಕೆ ಈ ವ್ಯವಸ್ಥೆಯಲ್ಲಿ ಬದಲಾವಣೆಗಳಾಗುತ್ತಿವೆ, ಉನ್ನತ ಸಾಮರ್ಥ್ಯದ ಮೊಬೈಲ್ ಫೋನ್ ಸಾಧನಗಳು ಎಲ್ಲರನ್ನೂ ತಲುಪುತ್ತಿದೆ.

# ಶಿಕ್ಷಕರ ICT ಜ್ಞಾನ ಮತ್ತು ಕೌಶಲಗಳು

2013ರಲ್ಲಿ NCERT ಬಳಿ ಇರುವ ಶೈಕ್ಷಣಿಕ ತಂತ್ರಜ್ಞಾನದ ಕೇಂದ್ರೀಯ ಸಂಸ್ಥೆಯ ವತಿಯಿಂದ ಶಿಕ್ಷಕರಿಗಾಗಿ ICT ಪಠ್ಯಕ್ರಮ ಮತ್ತು ತರಬೇತಿ ಕಾರ್ಯಕ್ರಮವನ್ನು ನಿರ್ಮಿಸಲಾಗಿದೆ. ಶಿಕ್ಷಕರು ಈ ಸಾಮರ್ಥ್ಯಗಳನ್ನು ಹೊಂದಿರುವುದನ್ನು ಈ ಸಂಸ್ಥೆಯು ಗುರುತಿಸಿದೆ.

- ICT ಸಾಧನಗಳನ್ನು, ಸಾಫ್ಟವೇರ್ ಅನ್ವಯಗಳನ್ನು ಮತ್ತು ಡಿಜಿಟಲ್ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸುವರು
- ಬೋದನೆ, ಕಲಿಕೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳಿಗೆ ICT ನ್ನು ಸಂಯೋಜಿಸುವರು.
- ಡಿಜಿಟಲ್ ಸಂಪನ್ಮೂಲಗಳನ್ನು ಪಡೆಯುವರು, ಸಂಘಟಿಸುವರು ಹಾಗೂ ಸೃಷ್ಟಿಸುವರು.
- ಶಿಕ್ಷಕರ ಸಂಪರ್ಕ ಜಾಲತಾಣಗಳಲ್ಲಿ ಭಾಗವಹಿಸುವರು
- ಸಂಪನ್ಮೂಲಗಳನ್ನು ಪರಿಶೀಲಿಸಿ ಆಯ್ಕೆಮಾಡಿಕೊಳ್ಳುವರು
- ICT ಬಳಕೆಯ ಪ್ರಾಯೋಗಿಕ, ಸುರಕ್ಷಿತ, ನೈತಿಕ ಮತ್ತು ಕಾನೂನು ಬದ್ಧ ಮಾರ್ಗಗಳನ್ನು ಗುರುತಿಸುವರು
- ಶಾಲಾ ಕೊರಡಿಗಳನ್ನು ಹೆಚ್ಚು ಸಮನ್ವಯಗೊಳಿಸಲು ICT ಬಳಸುವರು.

ಶಿಕ್ಷಕರಿಗಾಗಿ ICT ಸಾಮರ್ಥ್ಯವೃದ್ಧಿಯ ೊಂದು ಸಂಪನ್ಮೂಲ ಸಾಹಿತ್ಯವನ್ನು UNESCO ಅಭಿವೃದ್ಧಿಪಡಿಸಿದೆ-ಹೆಚ್ಚಿನ ವಿವರಗಳಿಗಾಗಿ ಗ್ರಂಥಋಣ ವಿಬಾಗವನ್ನು ನೋಡಿ

## ಪ್ರಕರಣ-1 ಪ್ರಸ್ತುತ ಯಾವ ತಂತ್ರಜ್ಞಾನವನ್ನು ಶಿಕ್ಷಕರು ಬಳಸುವರು

ಶ್ರೀ. ಮೊಹಂತಿಯವರು 20 ವರ್ಷಗಳಿಂದ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಮತ್ತು 10 ವರ್ಷಗಳಿಂದ ಶಾಲಾ ನಾಯಕರಾಗಿದ್ದಾರೆ. ಪ್ರಸ್ತುತ

ಶೈಕ್ಷಣಿಕ ಸಾಲಿನಲ್ಲಿ ಇವರ ಸಿಬ್ಬಂದಿಗಳಲ್ಲಿ ಇಬ್ಬರು ಯುವ ಶಿಕ್ಷಕರಿದ್ದಾರೆ. ಕಳೆದ ವಾರದಂದು ಮೊಹಂತಿಯವರು ಸಿಬ್ಬಂದಿ ಕೊಠಡಿಗೆ ಭೇಟಿ ನೀಡಿದಾಗ ಎಲ್ಲಾ ಶಿಕ್ಷಕರು ಮೊಬೈಲ್ ಫೋನ್ ನ ಸುತ್ತಲೂ ಸೇರಿ ಕುತೂಹಲದಿಂದ ನೋಡುತ್ತಿರುವುದನ್ನು ಗಮನಿಸಿದರು! ಪ್ರಾರಂಭದಲ್ಲಿ ಸ್ವಲ್ಪ ಕಸಿವಿಸಿಯಾಯಿತು, ಆದರೂ ಇದೇನು ಗಲಿಬಿಲಿ ಎಂದು ಸ್ವಲ್ಪ ಹತ್ತಿರ ಹೋಗಿ ನೋಡಿದರು ಆದರೆ ಈ ಯುವ ಶಿಕ್ಷಕರು ತಮ್ಮ ಬಳಿ ಇರುವ ಮೊಬೈಲ್ ಸಾಧನವನ್ನು ಬಳಸಿ ಕಲಿಕೆಯನ್ನು ವೃದ್ಧಿಗೊಳಿಸಲು ತಂತ್ರಜ್ಞಾನವನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದೆನ್ನುವುದರ ಬಗ್ಗೆ ತಿಳಿದುಕೊಳ್ಳುತ್ತಿರುವುದನ್ನು ಕೂಡಲೇ ಗ್ರಹಿಸಿದರು

ಶ್ರೀ. ಭಾಟಿಯಾ ಬಳಿ ಒಂದು ಸ್ಮಾರ್ಟ ಫೋನ್ ಇದೆ ಇವರು ಯು-ಟ್ಯೂಬ್ ನಿಂದ ಒಂದು ಚಿತ್ರವನ್ನು ಡೌನ್. ಲೋಡ್ ಮಾಡಿದ್ದಾರೆ. ಇದರಲ್ಲಿ ಅಂತಹ ವಿಶೇಷವೇನಿದೆ ಎಂದು ನಾನು ಕೇಳಿದಾಗ ಭಾಟಿಯಾರವರು ನನಗೆ ಚಿತ್ರವನ್ನು ಪ್ರದರ್ಶಿಸಿದರು. ನೀಲ್ ಆರ್ಮ್ ಸ್ಟ್ರಾಂಗ್ ರವರು ಚಂದ್ರನ ಮೇಲೆ ಇಳಿಯುತ್ತಿರುವ ಒಂದು ದೃಶ್ಯವದು ಮಂಗಳಯಾನದ. ಭಾರತದ ಕಾರ್ಯಾಚರಣೆ ಇತ್ತೀಚಿನ ಸುದ್ದಿಯಾಗಿರುವುದು ಎಲ್ಲರಿಗೂ ತಿಳಿದಿತ್ತು. ಚಂದ್ರನ ಮೇಲೆ ಮಾನವನು ಮೊದಲು ನಡೆದಾಗ ಅದನ್ನು ಜ್ಞಾಪಿಸಿಕೊಳ್ಳಲು ಆಗ ಅವರು ಅತೀ ಚಿಕ್ಕವರಾಗಿದ್ದರು.

೯ನೇ ತರಗತಿಗೆ ಗುರುತ್ವಾಕರ್ಷಣೆ ಪಾಠದ ಕುರಿತು ಅಭ್ಯಾಸ ಮಾಡುತ್ತಿರುವುದು ನನಗೆ ತಿಳಿದು ಬಂತು. ಕೂಡಲೇ ಈ ಚಿತ್ರವನ್ನು ಮಕ್ಕಳಿಗೆ ತೋರಿಸಿದರೆ ಎಷ್ಟು ಚೆನ್ನಾಗಿರುವುದು ಎನ್ನುವ ಅಂಶ ನನಗೆ ಹೊಳೆಯಿತು. ಯುವ ಶಿಕ್ಷಕರಿಗೆ ಅವರ ಫೋನ್ ನ್ನು ಹೇಗೆ ಬಳಸುವರೆಂದು ಅವರೊಂದಿಗೆ ಮಾತನಾಡಿದೆ-ಅವರು ಯಾವಾಗಲೂ ಇಂಟರ್ನೆಟ್ ನಲ್ಲಿಯೇ ಇರುತ್ತಾರೆ ಆದರೆ ತಮ್ಮ ಬೋಧನೆಯಲ್ಲಿ ಇಂಟರ್ನೆಟ್ ನ್ನು ಹೇಗೆ ಬಳಸಬಹುದು ಎನ್ನುವುದರ ಬಗ್ಗೆ ಅವರು ಆಲೋಚಿಸಿಯೇ ಇರಲಿಲ್ಲ. ವಿದ್ಯಾರ್ಥಿಗಳ ಒಂದು ಸಣ್ಣ ಗುಂಪಿಗೆ ಈ ಚಿತ್ರವನ್ನು ತೋರಿಸಲು ನಾನು ಅವರನ್ನು ಪ್ರೇರೇಪಿಸಿದೆ ಹಾಗೂ ತರಗತಿಯ ಉಳಿದ ಮಕ್ಕಳನ್ನು ಬೇರೆ ಚಟುವಟಿಕೆಯಲ್ಲಿ ತೊಡಗಿಸಲು ನಾನು ಸಲಹೆ ನೀಡಿದೆ. ಈ ಒಂದು ಸಂದರ್ಭದಲ್ಲಿ ಇಂಟರ್ನೆಟ್ ಕುರಿತು ನಾನು ಎಷ್ಟೊಂದು ಕಡಿಮೆ ಅರಿತಿದ್ದೇನೆ ಮತ್ತು ಈ ಯುವ ಶಿಕ್ಷಕರು ಎಷ್ಟೊಂದು ಜ್ಞಾನವನ್ನು ಪಡೆದಿದ್ದಾರೆ ಎನ್ನುವುದರ ಅರಿವು ನನಗಾಯಿತು.

ಈ ಪ್ರಕರಣವು ಶಾಲೆಗಳಲ್ಲಿ ಮೊಬೈಲ್ ಫೋನ್ ಗಳನ್ನು ಬಳಸುವ ವಿಷಯವನ್ನು ಕುರಿತು ಚರ್ಚಿಸುವುದು. ಕೆಲವು ರಾಜ್ಯ ಸರ್ಕಾರಗಳು ಶಾಲೆಗಳಲ್ಲಿ ಮೊಬೈಲ್ ಫೋನ್ ಬಳಸುವುದನ್ನು ಪ್ರೋತ್ಸಾಹಿಸುವುದಿಲ್ಲ ಹಾಗೂ ಬೋಧನಾ ಸಮಯದಲ್ಲಿ ಶಿಕ್ಷಕರು ದೂರವಾಣಿ ಕರೆಗಳನ್ನು ಮಾಡುವುದು ಹಾಗೂ ಮೊಬೈಲ್ ಸಂದೇಶಗಳನ್ನು ಕಳುಹಿಸುವುದು ಶಿಕ್ಷಕರ ವೃತ್ತೀಪರತೆಯನ್ನು ತೋರುವುದಿಲ್ಲ. ಸ್ಮಾರ್ಟ ಫೋನ್ ಗಳು ಇಂದು ಪ್ರಭಾವೀ ಮಾಧ್ಯಮವಾಗುತ್ತಿರುವುದರಿಂದ ತರಗತಿಯಲ್ಲಿ ಕಲಿಕೆಯನ್ನು ಬೆಂಬಲಿಸಲು ಶಿಕ್ಷಕರು ಮೊಬೈಲ್ ಫೋನ್ ಬಳಸುವುದು ಈ ಸಂದರ್ಭದಲ್ಲಿ ಹೆಚ್ಚು ಸೂಕ್ತ. ಆದರೆ ಈ ವಿಚಾರದಲ್ಲಿ ಹೆಚ್ಚು ಎಚ್ಚರಿಕೆಯಿಂದ ಕ್ರಮವಹಿಸುವುದು ಅಗತ್ಯ. ನಿಮ್ಮ ಶಿಕ್ಷಕರೊಂದಿಗೆ ಮಾತನಾಡಿ ವೃತ್ತೀಪರತೆಯ ಪ್ರಾಮುಖ್ಯತೆಯನ್ನು ಅರ್ಥೈಸಿಕೊಳ್ಳುವುದನ್ನು ಅವರೆಲ್ಲರಿಗೂ ಸ್ಪಷ್ಟಪಡಿಸಿ ಅಂದರೆ ಮಕ್ಕಳಿಗೆ ಕಲಿಕೆಗೆ ಲಾಭವಾಗುವಂತೆ ಶಿಕ್ಷಕರು ಅವರ ಫೋನ್ ಗಳನ್ನು ಬಳಸಲು ಅವರಿಗೆ ನೆರವಾಗುವಂತೆ ಸ್ವಲ್ಪ ಸಡಿಲಿಕೆಯಿಂದಿರಿ.

## ಚಟುವಟಿಕೆ-1 ತಂತ್ರಜ್ಞಾನ ವಿಮರ್ಷೆಯನ್ನು ಕೈಗೊಳ್ಳುವುದು

ಈ ಚಟುವಟಿಕೆಯ ಉದ್ದೇಶವೇನೆಂದರೆ ತ್ಂತ್ರಜ್ಞಾನವನ್ನು ಶಾಲೆಯಲ್ಲಿ ಪರಿಣಾಮಕಾರಿಯಾಗಿ ಹೇಗೆ ಬಳಸುವುದು ಎನ್ನುವುದರ ಕುರಿತು ನೀವು ಆಲೋಚಿಸಲಾರಂಭಿಸುವುದು ಮತ್ತು ಶಿಕ್ಷಕರು ತಮ್ಮ ನಿತ್ಯ ಜೀವನದಲ್ಲಿ ಮತ್ತು ಶಾಲೆಯಲ್ಲಿ ತಮ್ಮ ಬೋಧನೆಯಲ್ಲಿ ಯಾವ ತಂತ್ರಜ್ಞಾನವನ್ನು ಬಳಸುತ್ತಿರುವರು ಎಂಬುವುದನ್ನು ತಿಳಿದುಕೊಳ್ಳುವುದು

1. ಸಂಪನ್ಮೂಲ-1 ರಲ್ಲಿ ಪ್ರಶ್ನಾವಳಿಯನ್ನು ಪೂರ್ಣಗೊಳಿಸಲು ನಿಮ್ಮ ಶಿಕ್ಷಕರಿಗೆ ತಿಳಿಸಿ
2. ಪ್ರಶ್ನಾವಳಿಗೆ ಶಿಕ್ಷಕರು ಉತ್ತರಿಸಿರುವುದರ ಸಾರಾಂಶವನ್ನು ನಿಮ್ಮ ದಿನಚರಿಯಲ್ಲಿ ಬರೆದುಕೊಳ್ಳಿ-ತಮ್ಮ ಕೆಲಸದ ಬಗ್ಗೆ ಶಿಕ್ಷಕರು

ಎದುರಿಸುವ ಸಮಸ್ಯೆಗಳು ಮತ್ತು ಕಾಳಜಿಗಳು , ನಿತ್ಯ ಜೀವನದಲ್ಲಿ ಅವರು ಬಳಸುವ ತಂತ್ರಜ್ಞಾನ ಮತ್ತು ಪ್ರಸ್ತುತ ಅವರಲ್ಲಿರುವ ತಾಂತ್ರಿಕ ಕೌಶಲಗಳು

3. ಮುಖ್ಯವಾದ ಪ್ರತಿಯೊಂದು ಸಮಸ್ಯೆಗಳಿಗೆ ಮತ್ತು ಕಾಳಜಿಗಳಿಗೆ ತಂತ್ರಜ್ಞಾನ ಬಳಕೆಯಿಂದ ಹೇಗೆ ಪರಿಹಾರ ಒದಗಬಹುದು ಎಂಬುವುದರ ಬಗ್ಗೆ ಚಿಂತಿಸಿ. ಸಂಪನ್ಮೂಲ-2ರಲ್ಲಿ ಕೆಲವು ಪರಿಹಾರಗಳಿವೆ.
4. ನಿಮಗೆ ತಿಳಿದಿರುವ ಹಾಗೆ ತಂತ್ರಜ್ಞಾನದ ಯಾವ ಒಂದು ಅಂಶವು ನಿಮ್ಮ ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯ ಮೇಲೆ ಹೆಚ್ಚಿನ ಪ್ರಭಾವ ಬೀರಿದೆ.

**ಚರ್ಚೆ**

ತಂತ್ರಜ್ಞಾನದ ಬಳಕೆಯಲ್ಲಿ ನಿಮ್ಮ ಕೆಲವು ಶಿಕ್ಷಕರಿಗೆ ಆತ್ಮವಿಶ್ವಾಸವಿರಬಹುದು. ಕೆಲವರು ಅತಿ ಹೆಚ್ಚಿನ ಕಾರ್ಯಕ್ಷಮತೆಯನ್ನು ಹೊಂದಿರಬಹುದು. ತಂತ್ರಜ್ಞಾನದ ಬಳಕೆಗೆ ಹೆಚ್ಚಿನ ಅವಕಾಶವಿಲ್ಲದಿರುವ ಮತ್ತು ಕಡಿಮೆ ಕೌಶಲವನ್ನು ಹೊಂದಿರುವ ಆದರೆ ಕೆಲಸಮಾಡಲು ಆತ್ಮವಿಶ್ವಾಸವಿರುವ ಕೆಲವು ಶಿಕ್ಷಕರಿರಬಹುದು. ಆತ್ಮವಿಶ್ವಾಸದ ಕೊರತೆಯಿರುವ ಮತ್ತು ಸಮಸ್ಯೆ ಎದುರಾದ ಕೂಡಲೇ ಪ್ರಯತ್ನವನ್ನು ಬಿಟ್ಟುಬಿಡುವ ಕೆಲವರಿರಬಹುದು. ಶಿಕ್ಷಕರು ಪರಸ್ಪರ ಸಹವರ್ತಿ ಗುಂಪಿನಲ್ಲಿ ಕಲಿಯುವಂತೆ ಮತ್ತು ತಂತ್ರಜ್ಞಾನದ ಬಳಕೆಯಲ್ಲಿ ಆತ್ಮವಿಶ್ವಾಸವನ್ನು ಹೊಂದುವಂತಹ ವಾತಾವರಣವನ್ನು ನಿರ್ಮಿಸುವುದು ನಿಮ್ಮ ಕಾರ್ಯ

ಈ ಒಂದು ಹೆಬ್ಬಯಕೆಗೆ ಶಿಕ್ಷಕರು ಎಷ್ಟು ಹತ್ತಿರವಾಗಿದ್ದಾರೆ ಎನ್ನುವ ಕಲ್ಪನೆಯನ್ನು ಪ್ರಶ್ನಾವಳಿಯು ನಿಮಗೆ ನೀಡುವುದು. ICT ಚಾಂಪಿಯನ್ ರನ್ನು ಗುರುತಿಸಲು ಕೂಡ ಇದು ನಿಮ್ಮನ್ನು ಸಮರ್ಥರನ್ನಾಗಿಸುವುದು- ICTಯನ್ನು ಉತ್ತಮವಾಗಿ ಬಳಸಬಲ್ಲ ಮತ್ತು ಇತರರ ಮೇಲೆ ಪ್ರಭಾವ ಬೀರಲು ನಿಮಗೆ ನೆರವಾಗಬಲ್ಲ ಒಬ್ಬ ಶಿಕ್ಷಕ.

## ಪ್ರಕರಣ-2: ಲ್ಯಾಪ್ ಟಾಪ್ ಮತ್ತು ಪ್ರೊಜೆಕ್ಟರ್ ಬಳಸುವುದು

ಶ್ರೀಮತಿ ಮೆಹ್ತಾರವರು ಶಾಲಾ ನಾಯಕಿಯಾಗಿರುವರು. ತಮ್ಮ ಶಾಲೆಯಲ್ಲಿ ಲ್ಯಾಪ್ ಟಾಪ್ ನ್ನು ಹೇಗೆ ಬಳಸುವರು ಮತ್ತು ಇಂಟರ್ನೆಟ್ ಮೂಲಕ ಸಂಪನ್ಮೂಲಗಳನ್ನು ಮತ್ತು ಮಾಹಿತಿಗಳನ್ನು ಹೇಗೆ ಡೌನ್ ಲೋಡ್ ಮಾಡುವರು ಎಂಬುವುದರ ಕುರಿತು ಹೀಗೆ ವಿವರಿಸುವರು.

ನನ್ನ ಲ್ಯಾಪ್ ಟಾಪ್ ನನ್ನ ಬಳಿ ಇರುವ ಒಂದು ಅಮೂಲ್ಯ ಆಸ್ತಿ: ಎಲ್ಆ ಸಮಯದಲ್ಲೂ ನಾನು ಇದನ್ನು ಬಳಸುತ್ತೇನೆ. ನನ್ನ ಸ್ನೇಹಿತರ ಮನೆಯಲ್ಲಿ ನಾನು ಇಂಟರ್ನೆಟ್ ಗೆ ಸಂಪರ್ಕಿಸಿ ಶಾಲೆಗಾಗಿ ಅಗತ್ಯ ಸಂಪನ್ಮೂಲಗಳನ್ನು ಡೌನ್ ಲೋಡ್ ಮಾಡಿಕೊಳ್ಳುತ್ತೇನೆ. ಕೆಲವೊಮ್ಮೆ ನಾನು ಇಂಟರ್ನೆಟ್ ಬ್ರೌಸಿಂಗ್ ಕೇಂದ್ರಕ್ಕೆ ಭೇಟಿ ನೀಡಿ ಒಂದು ಘಂಟೆಯ ಅವಧಿಗೆ ಪಾವತಿಸಿ ಮಾಹಿತಿ ಪಡೆದುಕೊಳ್ಳುತ್ತೇನೆ. ಕಳೆದ ವಾರ ನಾನು 5 ನೇ ತರಗತಿ ವಿದ್ಯಾರ್ಥಿಗಳಿಗೆ ತೋರಿಸಲು ಇಂಗ್ಲೀಷ್ ನ ಒಂದು ವ್ಯಂಗ್ಯ ಚಿತ್ರವನ್ನು ಡೌನ್ನ್ ಲೋಡ್ ಮಾಡಿದ್ದೇನೆ.

ಲ್ಯಾಪ್ ಟಾಪನ್ನು ಟೇಬಲ್ ಮೇಲಿರಿಸಿ ಮಕ್ಕಳನ್ನು ನೆಲದ ಮೇಲೆ ಕುಳ್ಳಿರಿಸಿ ವೀಕ್ಷಿಸಲು ಹೇಳುತ್ತೇನೆ. ಆದರೆ ಕಳೆದ ಬಾರಿ ನಾನು ರೋಟರಿ ಸಂಸ್ಥೆಯವರ ಮನವೊಲಿಸಿ ಕಂಪ್ಯೂಟರ್ ಸಾದನಗಳಿಗಾಗಿ ರೂ.30,000 ದೇಣಿಗೆ ಪಡೆಯುವಲ್ಲಿ ನಾನು ಯಶಸ್ವಿಯಾದೆ. ಈ ಹಣವನ್ನು ನಾನು ಪ್ರೊಜೆಕ್ಟರ್ ಹಾಗೂ ಧ್ವನಿವರ್ಧಕಗಳನ್ನು ಕೊಂಡುಕೊಳ್ಳಲು ವಿನಿಯೋಗಿಸಿದೆನು. ನಾವೆಲ್ಲರೂ ವ್ಯಂಗ್ಯಚಿತ್ರವನ್ನು ನೋಡಿದೆವು. ಆದರೆ ಆಂಗ್ಲ ಬಾಷೆಯ ಶಬ್ದೋಚ್ಚಾರ ಅವರಿಗೆ ಅರ್ಥವಾಗುತ್ತಿಲ್ಲ ◌ಿಂಬುವುದು ನನಗೆ ಮನವರಿಕೆಯಾಯಿತು. ಇಂಗ್ಲೀಷ್ ಮಾತುಗಳೂ ಮಕ್ಕಳ ಮಟ್ಟಕ್ಕೆ ತುಂಬಾ ವೇಗದಾಯಕವಾಗಿತ್ತು. ಆದ್ದರಿಂದ ವ್ಯಂಗ್ಯಚಿತ್ರವನ್ನು ಯಾವುದೇ ಧ್ವನಿಯಿಲ್ಲದಂತೆ ವೀಕ್ಷಿಸಿ ಕಥೆಯೇನೆಂಬುವುದನ್ನು ತಿಳಿಯಲು

ಪ್ರಯತ್ನಿಸಿದೆವು. ಇದರ ನಂತರ ವ್ಯಂಗ್ಯಚಿತ್ರದಲ್ಲಿ ಹೆಚ್ಚಾಗಿ ಪುನರಾವರ್ತಿಸಲಾಗಿದ್ದ ಕೆಲವು ಪದಗಳನ್ನು ನಾನು ಪರಿಚಯಿಸಿದೆನು. ನಂತರ 'ಪದವನ್ನು ಗುರುತಿಸು' ಎಂಬ ಾಟವನ್ನು ನಾವು ಆಡಿದೆವು. ಇಂಗ್ಲೀಷ್ ನಲ್ಲಿ ಮಾತನಾಡುವ ಜನರನ್ನು ಮಕ್ಕಳು ಆಲಿಸಿದರೆ ಅವರಿಗೆ ಅನುಕೂಲವಾಗುವುದೆಂದು ನಾನು ಕಂಡುಕೊಂಡೆನು.- ಇದು ಅವರ ಉಚ್ಛಾರಣೆಗೆ ಮತ್ತು ಅರ್ಥೈಸುವಿಕೆಗೆ ನೆರವು ನೀಡುವುದು.

ಶಾಲೆಯಲ್ಲಿ ಇತರೆ ಇಬ್ಬರು ನನ್ನ ಶಿಕ್ಷಕರಿರುವರು ಅವರು ತಮ್ಮ ಪಾಠಗಳಲ್ಲಿ ಲ್ಯಾಪ್ ಟಾಪ್ ಬಳಸುವುದನ್ನು ನಾನು ನಿರೀಕ್ಷಿಸುವೆನು. ಇದರಿಂದ ತಂತ್ರಜ್ಞಾನದಲ್ಲಿ ಅವರು ಆತ್ಮವಿಶ್ವಾಸ ಮತ್ತು ಕೌಶಲವನ್ನು ಗಳಿಸುವರು. ಅಲ್ದೆ ಅವರ ಸಂಪನ್ಮೂಲ ಸಾಮಾಗ್ರಿಗಳ ವ್ಯಾಪ್ತಿ ವಿಸ್ತಾರವಾಗುವುದು. ಪ್ರಾರಂಭದಲ್ಲಿ ಅವರು ನನ್ನ ಪಾಠಗಳನ್ನು ವೀಕ್ಷಿಸುತ್ತಿದ್ದರು. ಆದರೆ ಆಗಲೇ ಅವರು ತಾವು ಬಳಸಬಹುದಾದ ನಿರ್ದಿಷ್ಟ ಸಂಪನ್ಮೂಲಗಳ ಕುರಿತು ನನ್ನನ್ನು ಕೇಳಲಾರಂಭಿಸಿದ್ದರು. ಉದಾಹರಣೆಗೆ ಮಾಲಿನ್ಯದ ಕುರಿತು

ಇಂಟರ್ನೆಟ್ ಬಳಸುವುದರಿಂದ ಮತ್ತು ಡೌನ್ಲೋಡ್ ಮಾಡಲಾದ ಅಂಶಗಳನ್ನು ಶಾಲೆಯಲ್ಲಿ ಉಪಯೋಗಿಸುವುದರಿಂದ ನಾವಿನ್ತೆ ಮತ್ತು ಮನೋಲ್ಲಾಸಗಳನ್ನು ಶಾಲೆಯಲ್ಲಿ ಹೇಗೆ ತ್ಂತ್ರಜ್ಞಾನದ ಮೂಲಕ ಬರಮಾಡಿಕೊಳ್ಳಬಹುದೆಂಬುವುದನ್ನು ಈ ಪ್ರಕರಣವು ತೋರಿಸುವುದು.ಶ್ರೀಮತಿ ಮೆಹ್ರರವರು ಕೆಲವೊಂದು ಕಂಪ್ಯೂಟರ್ ಸಾಧನಗಳಿಗೆ(ಲ್ಯಾಪ್ ಟಾಪ್, ಧ್ವನಿವರ್ಧಕ ಮತ್ತು ಪ್ರೊಜೆಕ್ಟರ್) ಹಣವನ್ನು ವಿನಿಯೋಗಿಸಿ ಇದನ್ನು ಬಳಸುವುದರ ಮೂಲಕ ಮಕ್ಕಳಲ್ಲಿ ಇಂಗ್ಲೀಷ್ ಕಲಿಕೆಯನ್ನು ಉತ್ತಮಪಡಿಸಲು ಪ್ರಯತ್ನಿಸಿದರು. ಮಕ್ಕಳು ಡೌನ್ ಲೋಡ್ ಮಾಡಲಾದ ಸಾಮಾಗ್ರಿಗಳಿಂದ ಪ್ರಯೋಜನವನ್ನು ಪಡೆದದ್ದಷ್ಟೇ ಅಲ್ಲದೆ ತಾವು ಬಳಸಿದ ಕಂಪ್ಯೂಟರ್ ಸಾಧನಗಳ ಮೂಲಕವೂ ಬಹಳಷ್ಟು ಲಾಭ ಪಡೆದರು. ಶಾಲಾ ನಾಯಕಿಯು ತನ್ನ ಗಮನವನ್ನು ಮಕ್ಕಳ ಮೇಲೆ ಕೇಂದ್ರೀಕರಿಸಿದ್ದಷ್ಟೇ ಅಲ್ಲದೆ ತನ್ನ ಸಿಬ್ಬಂದಿಗಳಲ್ಲಿ ಅಗತ್ಯ ಬೆಳವಣಿಗೆ ಮತ್ತು ಅವರ ಸಾಮರ್ಥ್ಯ ವರ್ಧನೆ  ಬಗ್ಗೆಯೂ ಗಮನ ಹರಿಸಿದ್ದರಿಂದ ಮತ್ತಷ್ಟೂ ಮಕ್ಕಳಿಗೆ ಪ್ರಯೋಜನವಾಗುವುದನ್ನು ಇಲ್ಲಿ ಗಮನಿಸಿ.

# 2 ನಿಮ್ಮ ವೈಯ್ಯಕ್ತಿಕ ಬಳಕೆಗಾಗಿ ತಂತ್ರಜ್ಞಾನ

ಇಂಟರ್ನೆಟ್ ಬಳಕೆ ಮಾಡುವುದರಿಂದ ಜ್ಞಾನ ಮತ್ತು ತರಬೇತಿಗಳು ಬೇರೆ ಬೇರೆ ಕಡೆಗಳಲ್ಲಿರುವ ಪ್ರತಿಯೊಬ್ಬರಿಗೂ ಸುಲಭವಾಗಿ ಲಭ್ಯವಾಗುವುದು. ಹೀಗಾಗಿ ಡಯಟ್ ನಂತಹ ಸ್ಥಳಗಳಿಗೆ ಹೆಚ್ಚಾಗಿ ಶಿಕ್ಷಕರು ಹೋಗುವ ಅವಶ್ಯಕತೆಯಿರುವುದಿಲ್ಲ. ಶಾಲಾ ನಾಯಕರು ಮತ್ತು ಶಿಕ್ಷಕರಿಗೆ ತಮ್ಮ ಸ್ವಕಲಿಕೆಯ ಉಸ್ತುವಾರಿ ಮಾಡಿಕೊಳ್ಳಲು ಇಂದು ಅವಕಾಶಗಳು ಉತ್ತಮವಾಗಿದ್ದು  ತಮ್ಮ ವರ್ತನಾ ಮಾದರಿಯನ್ನು ಮಕ್ಕಳಿಗೆ ಬಳಸಿದಾಗ ತುಂಬಾ ಅನುಕೂಲವಾಗುವುದು. ನಿಮ್ಮ ವೃತ್ತೀಪರತೆಯನ್ನು ಹೆಚ್ಚಿಸಲು ಮತ್ತು ನಿಮ್ಮ ಶಿಕ್ಷಕರ ವೃತ್ತಿ ಕೌಶಲಗಳನ್ನು ಕೂಡ ಬೆಳೆಸಲು ನಿಮ್ಮ ಮೊದಲನೇ ನಡೆ ಯಾವುದೆಂದರೆ ಇಂಟರ್ನೆಟ್ ನಲ್ಲಿ ಉಚಿತವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಹುಡುಕುವುದು. ಉಪಯುಕ್ತವಾಗುವ ಮಾಹಿತಿಗಳನ್ನು ಹಂಚಿಕೊಳ್ಳಿ ಮತ್ತು ನಿಮ್ಮದೇ ಸನ್ನಿವೇಶದಲ್ಲಿ ಮರುಬಳಕೆ ಮಾಡಿಕೊಳ್ಳಬಲ್ಲ ಯಾವುದೇ ಅಂಶಗಳನ್ನು  ಆಯ್ದುಕೊಳ್ಳಿರಿ.

TESS-ಇಂಡಿಯಾ ಸಂಸ್ಥೆಯು ಶಿಕ್ಷಕರಿಗಾಗಿ ಮತ್ತು ಶಾಲಾ ನಾಯಕರುಗಳಿಗಾಗಿ 125 ಮುಕ್ತ ಶೈಕ್ಷಣಿಕ ಸಂಪನ್ಮೂಲ(OER)ಗಳನ್ನು ತಯಾರಿಸಿವೆ. ಈ ಸಂಪನ್ಮೂಲಗಳು ಉಚಿತವಾಗಿರುವುದು ಮತ್ತು ಕ್ರಿಯೇಟಿವ್ ಕಾಮನ್ಸ್ ರವರ ಪರವಾನಗಿಯನ್ನು ಹೊಂದಿದೆ. ಅಂದೆ ನೀವಿದನ್ನು ಡೌನ್ ಲೋಡ್ ಮಾಡಬಹುದು, ಬದಲಾವಣೆ ಮಾಡಬಹುದು ಮತ್ತು ನಿಮಗೆ ಎಷ್ಟು ಪ್ರತಿಗಳು ಬೇಕೋ ಅಷ್ಟು ಪ್ರತಿಗಳನ್ನು ಅಚ್ಚು ಹಾಕಿಸಬಹುದು. ರಿಂದ ಿದರ ಬಳಕೆ ಸುಲಭ ಮತ್ತು ಹೆಚ್ಚು ಉಪಯುಕ್ತ. ಸಂದರ್ಭ ಮತ್ತು ಅಗತ್ಯತೆಗಳಿಗನುಗುಣವಾಗಿ ನೀವಿದನ್ನು ಮಾರ್ಪಾಟು ಮಾಡಿಕೊಳ್ಳಬಹುದು. TESS-ಇಂಡಿಯಾದ OERಗಳು ಇತರೆ ಸೂಕ್ತ OERಗಳನ್ನು ಹುಡುಕಿ ತೆಗೆಯಲು ಬಹುಷ: ಿದು ಉತ್ತಮ ಸ್ಥಳವಾಗಿರುವುದು. ಏಕೆಂದರೆ ಗುಣಮಟ್ಟದ ಅಂತರಾಷ್ಟ್ರೀಯ ಸಮಿತಿಯಿಂದ ಇದು ಅನುಮೋದಿಸಲ್ಪಟ್ಟಿದೆ.

ಚಿತ್ರ3: TESS-ಇಂಡಿಯಾ ವೆಬ್ ಸೈಟ್ ನಲ್ಲಿ ಲಭ್ಯವಿರುವ ಘಟಕಗಳು ನಿಮ್ಮ ಬಳಕೆಗೆ ಉಚಿತವಾಗಿ ಲಭ್ಯ.




**Figure 3** Units available from the TESS-India website are free for you to use.

## ಚಟುವಟಿಕೆ 2: O ER ಗಳಲ್ಲಿ ಹುಡುಕಾಟ

ಮುಂದಿನ ಬಾರಿ ನೀವು ಇಂಟರ್ನೆಟ್ ಪ್ರವೇಶಿಸಿದಾಗ ಕೆಲವು OER ಗಳನ್ನು ನೋಡಿ.

1. TESS-ಇಂಡಿಯಾ ವೆಬ್ ಸೈಟ್(http://www.tess-india.edu.in)ನಲ್ಲಿ ಲಭ್ಯವಿರುವ ಪ್ರಧಾನ ಸಂಪನ್ಮೂಲಗಳ ವಿವರವನ್ನು ನೋಡಿ. ನಿಮ್ಮ ಶಾಲೆಗೆ ಅನ್ವಯಿಸುವ ಹಾಗೂ ನಿಮ್ಮ ಸಂಸ್ಥೆಯ ಸಮಸ್ಯೆಗಳನ್ನು ನಿಭಾಯಿಸಬಲ್ಲ ಒಂದೆರಡು ಮುಖ್ಯ ಅಂಶಗಳನ್ನು ಆಯ್ದುಕೊಳ್ಳಿ. ಪ್ರದಾನ ಸಂಪನ್ಮೂಲಗಳ ದಾಖಲೆಗಳಲ್ಲಿ ವಿವರಿಸಲಾಗಿರುವ ತಮ್ಮ ತರಗತಿ ಕೋಣೆಯಲ್ಲಿ ಸೂಕ್ತ ಕ್ರಮಗಳನ್ನು ಅನುಷ್ಠಾನ ಮಾಡಲು ಶಿಕ್ಷಕರಿಗೆ ನೆರವು ನೀಡಬಲ್ಲ ಕನಿಷ್ಟ ಎರಡು ಶಿಕ್ಷಕ ಅಭಿವೃದ್ಧಿ OERಗಳನ್ನು ಕಂಡುಹಿಡಿಯಿರಿ. (ಗಣಿತ, ವಿಜ್ಞಾನ, ಇಂಗ್ಲೀಷ್ ಅಥವ ಭಾಷೆ ಮತ್ತು ಸಾಕ್ಷರತೆ.
2. ನಿಮ್ಮ ಶಿಕ್ಷಕರೊಂದಿಗೆ ಈ ಸಾಮಾಗ್ರಿಗಳ ಕುರಿತು ಚರ್ಚಿಸಲು ನಿಮ್ಮ ಕಲಿಕಾ ದಿನಚರಿಯಲ್ಲಿ ಒಂದು ಯೋಜನೆಯನ್ನು ಮಾಡಿಕೊಳ್ಳಿ. ಉದಾಹರಣೆಗೆ ನಿಮ್ಮ ಬಳಿ ಅವರ ಇ-ಮೇಲ್ ವಿಳಾಸವಿದ್ದಲ್ಲಿ ವೆಬ್ ಸೈಟ್ ಲಿಂಕ್ ನ್ನು ಅವರಿಗೆ ನೀವು ಕಳುಹಿಸಿಕೊಡಬಹುದು. ಅಥವ ಸಂಪನ್ಮೂಲಗಳನ್ನು ನಿಮ್ಮ ಲ್ಯಾಪ್ ಟಾಪ್ ನಲ್ಲಿ ಡೌನ್ ಲೋಡ್ ಮಾಡಿಕೊಮಡು ಒಬ್ಬ ಶಿಕ್ಷಕರಿಗೆ ಅವರ ಜೊತೆಯಲ್ಲಿ ಕುಳಿತು ಇವುಗಳನ್ನು ತೋರಿಸಬಹುದು.
3. ಇಂಟರ್ನೆಟ್ ನಲ್ಲಿ ಲಭ್ಯವಿರುವ ಇತರೆ ಕೆಲವು OER ಗಳನ್ನು ನೋಡಿ. ಸಂಪನ್ಮೂಲ 3 ರಲ್ಲಿ ಕೆಲವು ವೆಬ್ ವಿಳಾಸಗಳನ್ನು ನೀಡಲಾಗಿದೆ. ಅವುಗಳನ್ನು ನೀವು ತೆರೆಯಲು ಪ್ರಯತ್ನಿಸಬಹುದು.
4. ಸಂಪನ್ಮೂಲಗಳಿಗಾಗಿ ಪ್ರತಿಯೊಂದು ವೆಬ್ ವಿಳಾಸವನ್ನು ವಿಮರ್ಶಾತ್ಮಕವಾಗಿ ನೋಡಿ. ಸಂಪನ್ಮೂಲ 3 ರಲ್ಲಿ ನಿಮ್ಮ ಶಾಲೆಗೆ ಉಪಯುಕ್ತವಾಗಬಲ್ಲ ಸಂಪನ್ಮೂಲ ಸಾಮಾಗ್ರಿಗಳ ಅಗತ್ಯತೆಗಳ ಕುರಿತು ತೀರ್ಮಾನಿಸಲು ಒಂದು ಚೆಕ್ ಲಿಸ್ಟ ನೀಡಲಾಗಿದೆ.

**ಚರ್ಚೆ**

OER ಸಂಪನ್ಮೂಲಗಳನ್ನು ವಿವಿಧ ಉದ್ದೇಶಗಳ ಪೂರೈಕೆಗಾಗಿ ವೈವಿಧ್ಯತೆಯಿಂದ ಬಳಸಿಕೊಂಡು ವಿವಿಧ ಸನ್ನಿವೇಶಗಳಿಗೆ ಹೊಂದಾಣಿಕೆಯಾಗುವಂತೆ ಮಾರ್ಪಡಿಸಿಕೊಂಡು ಸರಳತೆಯಿಂದ ಬಳಸಿಕೊಳ್ಳುವಂತೆ ವಿನ್ಯಾಸಗೊಳಿಸಲಾಗಿದೆ. ನಿಮ್ಮ ಅಗತ್ಯತೆಗಳು ಪೂರೈಕೆಯಾಗುವಂತೆ OERಗಳಿಂದ ಸಂಪನ್ಮೂಲಗಳನ್ನು ಮತ್ತು ವಿಚಾರಗಳನ್ನು ಆಯ್ದುಕೊಂಡು ಅವುಗಳನ್ನು ಮರುಜೋಡಣೆ ಮಾಡಿಕೊಳ್ಳಬಹುದು. ಈ ಸಂಪನ್ಮೂಲಗಳನ್ನು ವಿಮರ್ಷಾತ್ಮಕವಾಗಿ ವೀಕ್ಷಿಸಿ ಗುಣಮಟ್ಟವನ್ನು ಮೌಲ್ಯಮಾಪನ ಮಾಡುವುದು ಅಗತ್ಯ. ಇಂಟರ್ನೆಟ್ ನಲ್ಲಿ ರಚಿಸಿ ಪ್ರಕಟಗೊಳಿಸಲು ಜಾಗತಿಕ ಸ್ವತಂತ್ರವಿರುವುದೆನ್ನುವುದರ ಅರ್ಥವೇನೆಂದರೆ OER ಯಾರಾದರೂ ಸರಿ ಸಾಮಾಗ್ರಿಗಳನ್ನು ಸಿದ್ಧಪಡಿಸಿ ಪ್ರಕಟಗೊಳಿಸಬಹುದೆನ್ನುವುದು.

ಪ್ರಕರಣ 3ರಲ್ಲಿ ಶಾಲಾ ಯುವ ನಾಯಕರಾಗಿರುವ ಶ್ರೀ. ರವೀಂದ್ರರವರು ಪಠ್ಯಕ್ರಮವು ಮಕ್ಕಳಿಗೆ ಹೆಚ್ಚು ಸಮಂಜಸವಾಗುವಂತೆ ಮಾಡಲು ಶಾಲೆಯಲ್ಲಿ ಇಂಟರ್ನೆಟ್ ಬಳಸಿ ಹೊಸ ಕೌಶಲಗಳನ್ನು ತಾನೇ ಸ್ವಯಂ ಅರಿತುಕೊಂಡು ಶಾಲೆಯಲ್ಲಿ ಬಳಸಿರುವುದನ್ನು ವಿವರಿಸಲಾಗಿದೆ. ಪ್ರಕರಣ 4 ರಲ್ಲಿ ಶ್ರೀ. ಕಪೂರ್ ರವರು ಒಬ್ಬ ಶಾಲಾ ನಾಯಕರಾಗಿ ಶಾಲೆಯ ಆಡಳಿತಾತ್ಮಕ ಸವಾಲುಗಳಿಗೆ ಪರಿಹಾರವಾಗಿ ಕಂಪ್ಯೂಟರ್ ಮತ್ತು ಇಂಟರ್ನೆಟ್ ಬಳಸಿಕೊಂಡಿರುವುದನ್ನು ವಿವರಿಸಲಾಗಿದೆ.

## ಪ್ರಕರಣ 3: ರವೀಂದ್ರರವರು ತಮ್ಮ ಜ್ಞಾನ ಮತ್ತು ಕೌಶಲಗಳ ವೃದ್ಧಿಗಾಗಿ ಇಂಟರ್ನೆಟ್ ಬಳಸಿರುವುದು.

ಸಮೀಪದ ಪಟ್ಟಣಕ್ಕೆ 35 ಕಿ.ಮೀ. ದೂರವಿರುವ ಒಂದು ಕಿರಿಯ ಪ್ರಾಥಮಿಕ ಶಾಲೆಯಲ್ಲಿ ರವೀಂದ್ರರವರು ಕೆಲಸ ಮಾಡುತ್ತಿದ್ದಾರೆ.

ನನಗೆ ಶಾಲೆಯಲ್ಲಿ ಕೆಲಸ ಮಾಡಲು ಇಷ್ಟ. ಆದರೆ ಈ ಶಾಲೆಯಿರುವ ಹಳ್ಳಿಯು ಪಟ್ಟಣದಿಂದ ತುಂಬಾ ದೂರದಲ್ಲಿರುವುದರಿಂದ ಇಲ್ಲಿ ಅಗತ್ಯ ಸೌಲಭ್ಯಗಳಿಲ್ಲ ಮತ್ತು ನಾನು ಬೆಳೆದ ಸ್ಥಳಕ್ಕಿಂತಲೂ ವಿಭಿನ್ನ ಸ್ಥಿತಿಯನ್ನು ಈ ಹಳ್ಳಿಯು ಹೊಂದಿದೆ. ನಾನು ಪಟ್ಟಣದಲ್ಲಿಯೇ ಉಳಿದುಕೊಂಡು ಶಾಲೆಗೆ ಪ್ರತಿದಿನ ಬಸ್ ನಲ್ಲಿ ಪ್ರಯಾಣಿಸುತ್ತೇನೆ. - ಪಟ್ಟಣದಲ್ಲಿ ನಾನು ಇಂಟರ್ನೆಟ್ ಬಳಸಲು ಅವಕಾಶವಿದೆ. ನನ್ನ ಬಳಿ ಒಂದು ಲ್ಯಾಪ್ ಟಾಪ್ ಇದ್ದು ಅದನ್ನು ಯಾವಾಗಲೂ ಬಳಸುತ್ತೇನೆ.

ನಾಲ್ಕು ವರ್ಷಗಳ ಹಿಂದೆ ನಾನು ಶಾಲೆಗೆ ಸೇರಿದಾಗ ದಾಖಲಾತಿಯಲ್ಲಿ 69 ಜನ ಮಕ್ಕಳಿದ್ದರು ಆದರೆ ಹಾಜರಾತಿ ಕೇವಲ ಶೇ.40 ರಷ್ಟಿತ್ತು. ಪೋಷಕರ ಮನೆಗಳಿಗೆ ಹೋಗಿ ನಾನು ವಿಚಾರಿಸಿದಾಗ ತರಗತಿಗಳು ತುಂಬಾ ನೀರಸವಾಗಿರುವುದಾಗಿಯೂ ಶಾಲೆಯಲ್ಲಿ ಕಲಿಸುವ ಅಂಶಗಳು ಅವರ ನಿತ್ಯಜೀವನಕ್ಕೆ ಬಳಕೆಯಾಗುವಂತಿಲ್ಲದಿರುವುದಾಗಿ ತಿಳಿದುಬಂತು. ನಾನು ಶಾಲೆಯ ವೇಲಾಪಟ್ಟಿಯನ್ನು ಬದಲಾಯಿಸಿ ಪ್ರತಿದಿನ ಬೆಳಗಿನ ಪ್ರಾರ್ಥನೆಯ ನಂತರ ಮತ್ತು ಅಪರಾಹ್ನದ ಊಟದ ನಂತರ ಎರಡು ಚಟುವಟಿಕಾ ಅವಧಿಗಳನ್ನು ನಡೆಸಲು ತೀರ್ಮಾನಿಸಿದೆನು.

ಹಳ್ಳಿಯಲ್ಲಿ ಕಲೆ ಮತ್ತು ಕರಕುಶಲಕಲೆಗಳ ಒಂದು ಉತ್ತಮ ಸಂಪ್ರದಾಯವಿತ್ತು. ನಾನೂ ಇಂಟರ್ನೆಟ್ ಬಳಸಿ ಬಾರತದ ೀ ಭಾಗದ ಜನರ ಸಂಸ್ಕೃತಿ ಮತ್ತು ಸಂಪ್ರದಾಯಗಳು ಹಾಗೂ ಅಗತ್ಯ ಕೌಶಲಗಳ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಂಡೆನು. ಯು-ಟ್ಯೂಬ್ ನಿಂದ ಚಿತ್ರಗಳನ್ನು ಬಳಸಿಕೊಂಡು ನಾನು ಸ್ವಯಂ ಕೆಲವು ಕವಶಲಗಳನ್ನು ಕಲಿತುಕೊಂಡೆನು ಮತ್ತು ಚಟುವಟಿಕಾ ಅವಧಿಯಲ್ಲಿ ಮಕ್ಕಳು ಕೈಗೊಳ್ಳುವಂತೆ ಕೆಲವು ಪ್ರಾಜೆಕ್ಟ ಗಳನ್ನು ನಾನು ವಿನ್ಯಾಸಗೊಳಿಸಿದನು. ಚಟುವಟಿಕಾ ಅವಧಿಗಳು ಹೆಚ್ಚು ಪ್ರಚಲಿತಗೊಂಡುವು. ಈಗ ಶಾಲಾ

ದಾಖಲಾತಿಯಲ್ಲಿ 257 ಜನ ಮಕ್ಕಳಿದ್ದಾರೆ ಮತ್ತು ಹಾಜರಾತಿ ಶೇ. ೯೦ರಷ್ಟಿದೆ. ಕಲೆ ಮತ್ತು ಕರಕುಶಲತೆಗಳಲ್ಲಿ ಮೊದಲಿಗೆ ಯಾವುದೇ ಅಧ್ಯಯನಗಳನ್ನು ಮಾಡಿರದೇ ಇದ್ದರೂ ಇದರಲ್ಲಿ ನಾನೀಗ ಒಬ್ಬ ತಜ್ಞನಾಗಿದ್ದೇನೆ.

## ಪ್ರಕರಣ 4: ಶ್ರೀ. ಕಪೂರ್ ರವರು ಒಬ್ಬ ಶಾಲಾ ನಾಯಕರಾಗಿ ತಮ್ಮ ಪಾತ್ರವನ್ನು ನಿರ್ವಹಿಸಲು ಸಹಾಯಕವಾಗಿ ತನ್ನ ಲ್ಯಾಪ್ ಟಾಪ್ ನ್ನು ಬಳಸಿರುವುದು.

*Mr* ಶ್ರೀ ಕಪೂರ್ ರವರು ಒಂಭತ್ತು ಜನ ಶಿಕ್ಷಕರಿರುವ ಒಂದು ಸಣ್ಣ ಗ್ರಾಮೀಣ ಮಾಧ್ಯಮಿಕ ಶಾಲೆಯಲ್ ಒಬ್ಬ ಶಾಲಾ ನಾಯಕರಾಗಿದ್ದಾರೆ. ಇವರಿಗೆ ತನ್ನ ಸ್ವಂತ ಲ್ಯಾಪ್ ಟಾಪ್ ಇದೆ.

ಶಾಲಾ ನಾಯಕನಾಗಿ ನಾನು ಕೆಸಕ್ಕೆ ಸೇರಿದಾಗ ನಾನು ಮಾಡಬೇಕಾದ ಅಗಾಧ ಆಡಳಿತಾತ್ಮಕ ಕೆಲಸ ಕಾರ್ಯಗಳನ್ನು ನೋಡಿ ನನಗೆ ಅಚ್ಚರಿಯಾಯಿತು. ಕಚೇರಿಯು ಕಡತಗಳಿಂದ ತುಂಬಿ ಹೋಗಿತ್ತು ಪ್ರತಿಯೊಂದರ ಜಾಡು ಹಿಡಿಯುವುದು ತೀರಾ ಕಷ್ಟಕರವಾಗಿತ್ತು. ನನ್ನ ಬಳಿ ಲ್ಯಾಪ್ ಟಾಪ್ ಇತ್ತು ಮತ್ತು ನನ್ನ ಸ್ನೇಹಿತನ ಮನೆಯಲ್ಲಿ ಇಂಟರ್ನೆಟ್ ನ್ನು ಬಳಸಬಹುದಿತ್ತು. ಕಚೇರಿ ಕಾರ್ಯಗಳ ನಿರ್ವಹಣೆಗೆ ನನಗೆ ಸಹಾಯಕವಾಗುವಂತೆ ಕಂಪ್ಯೂಟರ್ ನ್ನು ಬಳಸುವ ಮಾರ್ಗಗಳನ್ನು ಕಂಡುಕೊಳ್ಳಲು ನಾನು ಇಚ್ಚಿಸಿದೆನು. ಕಂಪ್ಯೂಟರ್ ನಲ್ಲಿ ಸ್ಪ್ರೆಡ್ ಶೀಟ್ ನ್ನು ಬಳಸಿ ಶಿಕ್ಷಕರು ನೀಡುವ ದತ್ತಾಂಶಗಳ ಜಾಡು ಕಂಡುಕೊಳ್ಳಲು ನಾನು ನಿರ್ಧರಿಸಿದೆನು.

ಮೊದಲಿಗೆ ನಾನು ಸ್ಪ್ರೆಡ್ ಶೀಟ್ ಬಳಸುವುದನ್ನು ಕಲಿಯಬೇಕಿತ್ತು. ಈಗ ನಾವು ಯಾವ ಹಂತಕ್ಕೆ ತಲುಪಿದ್ದೇವೆಂದರೆ ಎಲ್ಲಾ ಶಿಕ್ಷಕರು ಪ್ರತಿಯೊಂದು ಘಟಕ ಪರೀಕ್ಷೆಯ ಅಂಕಗಳನ್ನು ನನ್ನ ಕಂಪ್ಯೂಟರ್ ನ ಸ್ಪ್ರೆಡ್ ಶೀಟ್ ನಲ್ಲಿ ದಾಖಲಿಸಲು ಅವರಿಗೆ ಕಲಿಸಿದ್ದೇನೆ. ಈ ದತ್ತಾಂಶಗಳನ್ನು ಬಳಸಿ ನಾನು ಸರಾಸರಿಯನ್ನು ಲೆಕ್ಕಾಚಾರ ಮಾಡುತ್ತೇನೆ ಮತ್ತು ನಕ್ಷೆಯಲ್ಲಿ ವಿಶ್ಲೇಷಣೆ ಮಾಡುತ್ತೇನೆ. ಈ ವಿಶ್ಲೇಷಣೆಯ ಕಾರಣದಿಂದ ವಿಜ್ಞಾನ ಶಿಕ್ಷಕರು ತಮ್ಮ ವಿಷಯ ವ್ಯಾಪ್ತಿಯ ಹೊರಗಿನ ವಿಷಯವನ್ನು ಬೋಧಿಸುವಾಗ ಪರೀಕ್ಷೆಗಳ ಂಕಗಳಲ್ಲಿ ಅಗಾಧವಾದ ವ್ಯತ್ಯಾಸವಿರುವುದನ್ನು ನಾನು ಕಂಡುಹಿಡಿದೆನು.

ನನ್ನ ಸಿಬ್ಬಂದಿಗಳಲ್ಲಿ ಇಬ್ಬರು ವಿಜ್ಞಾನ ಶಿಕ್ಷಕರಿದ್ದಾರೆ. ಒಬ್ಬರು ಬೌತ ವಿಜ್ಞಾನವನ್ನು ಮತ್ತೊಬ್ಬರು ಜೀವ ವಿಜ್ಞಾನವನ್ನು ಅಧ್ಯಯನ ಮಾಡಿದ್ದಾರೆ. ಆದರೆ ಅವರಿಬ್ಬರೂ ಇಡೀ ಪಠ್ಯವನ್ನು ಬೋಧಿಸಬೇಕಿತ್ತು. ವೈಜ್ಞಾನಿಕ ವಿಚಾರಗಳನ್ನು ಸ್ಪಷ್ಟವಾಗಿ ವಿವರಿಸಬಲ್ಲ ಕೆಲವು ಸಾಮಾಗ್ರಿಗಳು ಆನ್ ಲೈನ್ ನಲ್ಲಿರುವುದನ್ನು ನಾನು ನೋಡಿದ್ದೆನು. ಕಳೆದ ವಾರ ನಮ್ಮ ಶಿಕ್ಷಕರಿಗೆ ನಾನಾನು ತರಗತಿ ತೆಗೆದುಕೊಂಡಿದ್ದೆ ಮತ್ತು ಪ್ರತಿಯೊಬ್ಬರಿಗೂ ಒಂದು ಘಂಟೆಯ ಅವದಿಗೆ ಬಳಸಿಕೊಳ್ಳಲು ನನ್ನ ಲ್ಯಾಪ್ ಟಾಪ್ ನೀಡಿದ್ದೆ. ನಾನು ಕೆಲವು ವೀಡಿಯೋಗಳನ್ನು ಮತ್ತು ಪಠ್ಯಪುಸ್ತಕದಲ್ಲಿ ಲಭ್ಯವಾಗದ ಅವರ ಊಹೆಗೂ ಮೀರಿದ ಮಾದರಿ ಚಿತ್ರಗಳನ್ನು ನಾನು ಡೌನ್ ಲೋಡ್ ಮಾಡಿದ್ದೆನು. ನಾನು ಕಂಪ್ಯೂಟರ್ ಮೌಸ್ ನ್ನು ಹೇಗೆ ಬಳಸಬೇಕೆಂದು ಅವರಿಗೆ ತಿಳಿಸಿದೆನು ಮತ್ತು ಕಡತವನ್ನು ಹೇಗೆ ತರೆಯುವುದು ಮತ್ತು ಮುಚ್ಚುವುದು ಎಂಬುವುದರ ಬಗ್ಗೆಯೂ ಅವರಿಗೆ ತೋರಿಸಿ ಸಾಮಾಗ್ರಿಗಳನ್ನು ಕಂಪ್ಯೂಟರ್ ನಲ್ಲಿ ಪರಿಶೋಧಿಸಲು ತಿಳಿಸಿದನು. ಇಬ್ಬರೂ ಶಿಕ್ಷಕರೂ ಮುಂದಿನ ಪಾಠವನ್ನು ಮಾಡಲು ಉತ್ತಮವಾಗಿ ಸಜ್ಜುಗೊಂಡಿರುವುದಾಗಿ ತಿಳಿಸಿದರು. ತರಗತಿಯಲ್ಲಿ ಮಾದರಿ ಚಿತ್ರಗಳನ್ನು ತೋರಿಸಲು ಅವರಿಬ್ಬರೂ ಕೂಡ ನನ್ನ ಲ್ಯಾಪ್ ಟಾಪ್ ನ್ನು ಪಡೆದುಕೊಳ್ಳಲು ಬಯಸಿದ್ದಾರೆ.

## ಚಟುವಟಿಕೆ 3: ನಿಮ್ಮ ಸ್ವಕಲಿಕೆಯ ಅಗತ್ಯತೆಗಳ ಕುರಿತು ಚಿಂತಿಸುವುದು.

ನಿಮ್ಮ ICT ಕೌಶಲದ ಕುರಿತು ವಿಶ್ರಾಂತ್ಮಕವಾಗಿ ಚಿಂತಿಸಿ. ಯಾವ ಕೌಶಲಗಳನ್ನು ಅಭಿವೃದ್ಧಿಗೊಳಿಸಲು ನೀವು ಇಚ್ಛಿಸುವಿರಿ? ಈ ಕೌಶಲಗಳನ್ನು ನೀವು ಹೇಗೆ ಬೆಳೆಸುವಿರಿ-ನಿಮಗೆ ಸಹಾಯ ಮಾಡುವ ಯಾರಾದರೂ ಶಿಕ್ಷಕರಿದ್ದಾರೆಯೇ?

ಈ ಘಟಕದಲ್ಲಿ ನೀವು ಇದುವರೆಗೆ ಓದಿದ ಎಲ್ಲಾ ಅಂಶಗಳನ್ನು ಬಳಸಿಕೊಂಡು ಶಾಲಾ ನಾಯಕನಾಗಿ ನಿಮಗೆ ನೆರವಾಗಲು ಅಥವ ನಿಮ್ಮ ವೃತ್ತೀಪರ ಕೌಶಲಗಳ ಬೆಳವಣಿಗೆಯಲ್ಲಿ ಈ ಕೆಳಗೆ ನೀಡಲಾಗಿರುವ ಸಾಧನಗಳನ್ನು ನೀವು ಹೇಗೆ ಬಳಸಿಕೊಳ್ಳುವಿರಿ ಎಂಬುವುದರ ಬಗ್ಗೆ ಚಿಂತಿಸಿ.

- ವರ್ಡ ಪ್ರಾಸೆಸಿಂಗ್, ಸ್ಪ್ರೆಡ್ ಶೀಟ್ ಮತ್ತು ಪ್ರೆಸೆಂಟೇಶನ್ ಕಾರ್ಯಕ್ರಮಗಳಿರುವ ಒಂದು ಲ್ಯಾಪ್ ಟಾಪ್
- ಇಂಟರ್ನೆಟ್ ನ ವೈ-ಫೈ ವ್ಯವಸ್ಥೆಯಿರುವ ೊಂದು ಲ್ಯಾಪ್ ಟಾಪ್
- ಇಂಟರ್ ನೆಟ್ ಸೌಲಭ್ಯವಿಲ್ಲದ ೊಂದು ಮೊಬೈಲ್ ಫೋನ್
- ಒಂದು ಸ್ಮಾರ್ಟ್ ಫೋನ್
- ಒಂದು ಟ್ಯಾಬ್ ಲೆಟ್
- ಒಂದು ಎಲ್.ಸಿ.ಡಿ. ಪ್ರೊಜೆಕ್ಟರ್.

ನಿಮ್ಮ ಕಲಿಕಾ ದಿನಚರಿಯಲ್ಲಿ ಯಾವೆಲ್ಲಾ ಸಾಮಗ್ರಿಗಳು ನಿಮ್ಮ ಶಾಲೆಯಲ್ಲಿರುವುದನ್ನು ಬಯಸುವಿರಿ ಎನ್ನುವ ಒಂದು "ಇಚ್ಛೆಯ ಪಟ್ಟಿ"ಯನ್ನು ಮಾಡಿಕೊಳ್ಳಿ. ಈಗ ನಿಮ್ಮ ಸಮೂಹ ಮತ್ತು ಸಂಪರ್ಕ ಜಾಲದ ಬಗ್ಗೆ ಆಲೋಚಿಸಿ. ಯಾರಾದರೂ ವ್ಯಕ್ತಿಗಳು ಅಥವ ಗುಂಪು ಸಾಧನವನ್ನು ನೀವು ಪಡೆಯಲು ನಿಮಗೆ ಸಹಾಯ ಮಾಡುವರೇ? ಮೊದಲ ಈ ಪಟ್ಟಿಯು ನಿಮಗೆ ಅನುದಾನಗಳ ಸಂಗ್ರಹಣೆಗಾಗಿ ಮತ್ತು ಯಾರು ನೆರವಾಗಬಹುದು ಎಂದು ನಿರ್ಧಿಷ್ಟ ಹಾದಿಯತ್ತ ನೋಡಲು ನೆರವಾಗುವುದು.

**ಚರ್ಚೆ**

ಆಡಳಿತಾತ್ಮಕ ಕೆಲಸ ಕಾರ್ಯಗಳನ್ನು ಹೆಚ್ಚು ಸುಲಭವಾಗಿ ಮತ್ತು ಹೆಚ್ಚು ದಕ್ಷತೆಯಿಂದ ನಿರ್ವಹಿಸುವಂತೆ ಮಾಡಲು ತಂತ್ರಜ್ಞಾನವು ನಿತ್ಯ ಜೀವನದಲ್ಲಿ ನಿಮಗೆ ನೆರವಾಗುವುದು. ಉದಾಹರಣೆಗೆ ಪರೀಕ್ಷೆಗಳ ಅಂಕಗಳ ಹೆಚ್ಚಿನ ವಿಶ್ಲೇಷನಾತ್ಮಕ ಅಧ್ಯಯನದಿಂದ ನಾಲ್ಕನೇ ಪ್ರಕರಣದಲ್ಲಿ ಶ್ರೀ. ಕಪೂರ್ ರವರು ಸಮಸ್ಯೆಯನ್ನು ಪತ್ತೆಹಚ್ಚಿ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಯಿತು.

ಇಂಟರ್ನೆಟ್ ಎನ್ನುವುದು ಮಾಹಿತಿಗಳ ಒಂದು ಆಕರ ಮತ್ತು ವೃತ್ತೀಪರ ಬೆಳವಣಿಗೆಗೆ ಸೂಕ್ತ ಸಾಮಾಗ್ರಿಯಾಗಿರುವುದು. ನಿಮ್ಮ ಸ್ವಕಲಿಕೆಗೆ ನೆರವಾಗಬಲ್ಲ ಸಾಮಾಗ್ರಿಗಳಿವೆ ಮತ್ತು ನಿಮ್ಮ ಶಿಕ್ಷಕರಿಗೆ ತರಬೇತಿ ನೀಡಲು ನಿಮಗೆ ನೆರವಾಗಬಲ್ಲ ಸಂಪನ್ಮೂಲ ಸಾಧನಗಳೂ ಇಲ್ಲಿವೆ. ಆದ್ದರಿಂದ ಶಿಕ್ಷಕರು ಯಾಯುದೋ ಒಂದು ತರಬೇತಿ ಕೋರ್ಸಗೆ ಸೀಮಿತವಾಗಬೇಕಿಲ್ಲ.

ನಿಮಗೆ ಇಷ್ಟವಾದ ಹಾರ್ಡವೇರ್ ನ್ನು ಕೊಂಡುಕೊಳ್ಳಲು ನೀವು ಚಿಂತಿಸಿದಾಗ ಅವುಗಳ ನಿರ್ವಹಣೆಯ ಅಗತ್ಯತೆ ಮತ್ತು ವೆಚ್ಚದ ಬಗ್ಗೆಯೂ ನೀವು ಆಲೋಚಿಸಬೇಕು. ಆದ್ದರಿಂದ ಒಂದು ಬಜೆಟ್ ನ್ನು ಮಾಡಿಕೊಳ್ಳುವುದು ಮುಖ್ಯ ಹಾಗೂ ಈ ಸಾಧನಗಳ ಸರ್ವಿಸ್ ಮಾಡಬಲ್ಲ ಜನರನ್ನೂ ಗುರುತಿಸಿಕೊಳ್ಳಬೇಕು.

ಈ ಘಟಕವು ನಿಮ್ಮ ವೈಯ್ಯಕ್ತಿಕ ಬಳಕೆಗೆ ತಂತ್ರಜ್ಞಾನವನ್ನು ಬಳಸುವುದರ ನಿಮ್ಮ ಸಾಮರ್ಥ್ಯಕ್ಕೆ ಈ ವಿಭಾಗವು ಹೆಚ್ಚು ಒತ್ತು ನೀಡಿದೆ. - ಹೊಸ ಕೌಶಲಗಳ ಕಲಿವಿನ ಅವಕಾಶಗಳಿಗೆ ಮಹತ್ವ ನೀಡಿರುವುದು, ಹೊಸ ಸಾಧನಗಳನ್ನು ನೀಡುವುದು, ಮತ್ತು ಉಚಿತ ಶೈಕ್ಷಣಿಕ ಸಾಮಾಗ್ರಿಗಳನ್ನು ಒದಗಿಸುವುದು. ತಂತ್ರಜ್ಞಾನದ ಇತರೆ ಉಪಯೋಗಗಳು ಈ ಕೇಳಗಿನವುಗಳಾಗಿರಬಹುದು.

- ಮಕ್ಕಳು ಸಹವರ್ತಿ ಗುಂಪಿನಲ್ಲಿ ಕೆಲಸ ಮಾಡುವುದನ್ನು ಪ್ರೋತ್ಸಾಹಿಸಲು ಮತ್ತು ಪೋಷಕರಿಗೆ ಹಿಮ್ಮಾಹಿತಿ ನೀಡಲು ಮಕ್ಕಳ ಕಾರ್ಯ ಚಟುವಟಿಕೆಗಳ ಚಾಯಾಚಿತ್ರಗಳನ್ನು ತೆಗೆಯುವುದು.
- ನಿಮ್ಮ ಕಾರ್ಯನಿರ್ವಹಣೆಯನ್ನು ಪ್ರಕಟಣೆಗೊಳಿಸಲು ಮತ್ತು ಸಂಭವನೀಯ ಾರ್ಥಿಕ ನೆರವು ನೀಡುವ ದಾನಿಗಳಿಗೆ ತೋರಿಸಲು ಶಾಲೆಯ ವೀಡಿಯೋ ಚಿತ್ರಣ ಮಾಡುವುದು.
- ಇತರೆ ಶಾಲಾ ನಾಯಕರೊಂದಿಗೆ ಸಂವಹನ ಮಾಡಲು ಮತ್ತು ಜೊತೆಯಾಗಿ ಕಾರ್ಯ ನಿರ್ವಹಿಸಲು ಆನ್ ಲೈನ್ ನಲ್ಲಿ ಸಂಪರ್ಕ ಜಾಲಕ್ಕೆ ಸೇರುವುದು
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಾಗಿ ನಿಮ್ಮ ಶಾಲೆಯ ಕುರಿತು ದಾಖಲೆಗಳು, ವರದಿಗಳು ಮತ್ತು ವಿಷಯ ಮಂಡನೆಗೆ ಪಿಪಿಟಿ ಸಿದ್ಧಪಡಿಸುವುದು.
- ಶಿಕ್ಷಣ ಕ್ಷೇತ್ರದಲ್ಲಿ ಪ್ರಸ್ತುತ ಬೆಳವಣಿಗೆಗಳ ಇತ್ತೀಚಿನ ಮಾಹಿತಿಗಳನ್ನು ತಿಳಿದಿರುವುದು ಮತ್ತು ಇತರರು ಸಮಸ್ಯೆಗಳನ್ನು ಹೇಗೆ ಎದುರಿಸುತ್ತಾರೆ ಎಂಬುವುದನ್ನು ಕಂಡುಕೊಳ್ಳುವುದು.
- ಹೊಸ ಕೌಶಲಗಳನ್ನು ಗಳಿಸಲು ನಿಮ್ಮ ಶಿಕ್ಷಕರನ್ನು ಪ್ರೇರೇಪಿಸುವುದು
- ನಿಮ್ಮ ಶಿಕ್ಷಕರೊಂದಿಗೆ  ಸಂವಹನ ಮಾಡಲು ಟೆಕ್ಸ್ಟ್ ಮೆಸೇಜ್ ಗಳನ್ನು ಬಳಸುವುದು.

# 3. ತಂತ್ರಜ್ಞಾನದ ಬಳಕೆಯಲ್ಲಿ ಶಿಕ್ಷಕರಿಗೆ ನೆರವಾಗುವುದು

ಒಂದನೇ ಚಟುವಟಿಕೆಯಲ್ಲಿ ನೀವು ಬಳಸಲಾದ ಪ್ರಶ್ನಾವಳಿಗಳು ನಿಮ್ಮ ಶಾಲೆಯಲ್ಲಿ ಶಿಕ್ಷಕರಿಗೆ ICT ನ್ನು ಬಳಸುವುದರಲ್ಲಿ ಅವರಿಗಿರುವ ವಿವಿಧ ಕೌಶಲ ಮತ್ತು ಅನುಭವಗಳನ್ನು ತೋರುವುದು. ಸಾಮಾನ್ಯವಾಗಿ ಇದನ್ನು 'ಡಿಜಿಟಲ್ ಸಾಕ್ಷರತೆ' ಎಂದು ಕರೆಯಲಾಗುವುದು.ಅವರ ವೃತ್ತೀಪರ ಬೆಳವಣಿಗೆಯನ್ನು ಬೆಂಬಲಿಸಲು ಇದನ್ನು ಹೇಗೆ ಬಳಸುವುದು ಮತ್ತು ತರಗತಿಯಲ್ಲಿ ಕಲಿಕೆಗೆ ಸಹಾಯಕವಾಗಿ ತಂತ್ರಜ್ಞಾನವನ್ನು ಹೇಗೆ ಬಳಸಬೇಕೆಂಬುದನ್ನು ತಿಳಿದುಕೊಳ್ಳುವುದರ ಬಗ್ಗೆ ಶಿಕ್ಷಕರನ್ನು ಪ್ರೋತ್ಸಾಹಿಸುವುದು ನಿಮ್ಮ ಪಾತ್ರವಾಗಿರುತ್ತದೆ. ಶಿಕ್ಷಕರನ್ನು ICT ನಲ್ಲಿ ತರಬೇತುಗೊಳಿಸಲು ಇರುವ ಅಗತ್ಯ ಮಾರ್ಗಗಳನ್ನು ನಾಲ್ಕು ವಿಭಾಗಗಳಾಗಿ ವಿಭಜಿಸುವುದು ನಮಗೆ ಸಹಾಯಕ., ಕೆಳಗೆ ನೀಡಲಾಗಿದೆ(ಸ್ವಿಕೇಟಿನಿಂದ ಪಡೆದುಕೊಳ್ಳಲಾಗಿದೆ, 2005)

- **ಪ್ರಮುಖ ICT ಕೌಶಲಗಳನ್ನು ಬೆಳೆಸುವುದು**: ಮೌಸ್ ನ ಚಲನೆ ಅಥವ ಕಡತವನ್ನು ತರೆಯುವುದು, ಮುಚ್ಚುವುದು ಮೊದಲಾದ ಮೂಲ ಕೌಶಲಗಳಲ್ಲಿ ನಿಮ್ಮ ಕೆಲವು ಶಿಕ್ಷಕರಿಗೆ ನೆರವು ನೀಡುವ ಅಗತ್ಯತೆಯಿರಬಹುದು. ಶಿಕ್ಷಕರಿಗೆ ಅವರ ಕೆಲಸ ಕಾರ್ಯಗಳಲ್ಲಿ ಅವರಿಗೆ ಅಗತ್ಯ ನೆರವು ನೀಡುವ ಒಂದು ಸಾಧನವೇ ICT ಎಂಬುದನ್ನು ಅವರು ಕಾಣುವಂತೆ ಆತ್ಮವಿಶ್ವಾಸವನ್ನು ಅವರಲ್ಲಿ ತುಂಬುವುದು ನಿಮ್ಮ ಸವಾಲಾಗಿರುವುದು.
- **ICT ಬಳಸಿ ಬೋಧನಾ ಕೌಶಲಗಳನ್ನು ಬೇಳೆಸುವುದು**: ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು(ಎನ್.ಸಿ.ಎಫ್-2005)ನಲ್ಲಿ ತಿಳಿಸಿರುವಂತೆ ಶಾಲೆಗಳಲ್ಲಿ ಕಲಿಕಾ ಪ್ರಕ್ರಿಯೆಗಳಲ್ಲಿ ಬಾಗವಹಿಸುವಿಕೆಯ ವಿಧಾನಗಳಿಗೆ ICT ಬೆಂಬಲ ನೀಡುವುದು. ಬಾಯಿಪಾಠ ಮಾಡುವ ವಿಧಾನಗಳಿಂದ ಹೊರಬಂದು ಉನ್ನತ ಮಟ್ಟದ ಕೌಶಲಗಳಾದ ಸಮಸ್ಯಾ ಪರಿಹಾರ, ಪ್ರಶ್ನಿಸುವಿಕೆ, ಸಂಘಟನೆ, ಮೌಲ್ಯಮಾಪನ ಮತ್ತು ಜ್ಞಾನ ಸಂಪಾದನೆ(ಲಾಷೆಮ್, 2010), ಇತ್ಯಾದಿ ಕೌಶಲಗಳನ್ನು ಗಳಿಸಲು ICT ನೆರವಾಗುವುದು. ಸಮನ್ವಯ ಶಿಕ್ಷಣವನ್ನೂ ಕೂಡ ICT ಬೆಂಬಲಿಸುವುದು.(ಶೈಕ್ಷಣಿಕ ತಂತ್ರಜ್ಞಾನದ ಕೇಂದ್ರ ಸಂಸ್ಥೆ, 2013) ಅಂದರೆ ಅಂಚಿನಲ್ಲಿರುವ ಗುಂಪುಗಳಿಗೂ ಕೂಡ ಸಾಮಾಗ್ರಿ ಮತ್ತು ಸಂಪನ್ಮೂಲಗಳು ಲಭ್ಯವಾಗುವುದನ್ನು ಖಾತ್ರಿಗೊಳಿಸುವುದು. ಸಣ್ಣ ವೀಡಿಯೋಗಳು ಮತ್ತು ಮಾದರಿ ಚಿತ್ರಗಳು ಚರ್ಚೆಯನ್ನು ಹುಟ್ಟುಹಾಕುವುದು. ಮಕ್ಕಳು ತಮ್ಮದೇ ಆದ ಒಂದು ವಿಷಯ ಮಂಡನೆಯನ್ನು ತಯಾರಿಸಬಹುದು. ಇಲ್ಲಿನ ವಿದ್ಯಾರ್ಥಿಗಳು ಪ್ರಪಂಚದ ಬೇರೆ ಭಾಗದ ವಿದ್ಯಾರ್ಥಿಗಳೊಂದಿಗೆ ಸಹಯೋಗದ ಕಲಿಕೆ ನಡೆಸಬಹುದು ಮತ್ತು ಸಂವಹನ ಮಾಡಬಹುದು. . ಮಕ್ಕಳೇ ಇಲ್ಲಿ

ತಜ್ಞರಾಗುವುದರಿಂದ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧವು ಹೆಚ್ಚಾಗಿ ಪ್ರಜಾಪ್ರಭುತ್ವದ ತಳಹದಿಯನ್ನು ಪಡೆಯುವುದು ಹಾಗೂ ವಿದ್ಯಾರ್ಥಿಗಳು ಹೆಚ್ಚು ಆತ್ಮ ಗೌರವವನ್ನು ಪಡೆಯುವರು. ನಿಮ್ಮ ಶಾಲೆಗೆ ಯಾವ ತಂತ್ರಜ್ಞಾನವನ್ನು ಕೊಂಡುಕೊಳ್ಳಬೇಕೆಂದು ನೀವು ನಿರ್ಧರಿಸಬೇಕಾದಾಗ ಶಿಕ್ಷಕರಿಗೆ ಅವರ ಬೋಧನೆಯನ್ನು ಅಭಿವೃದ್ಧಿಗೊಳಿಸಲು ಯಾವ ತಂತ್ರಾಂಶವು ಹೆಚ್ಚಾಗಿ ಅವರಿಗೆ ನೆರವಾಗುವುದೋ ಅದಕ್ಕೆ ಪ್ರಾಧಾನ್ಯತೆ ನೀಡಬೇಕು.

- **ವಿಷಯದ ಕಲಿಯುವಿಕೆಗೆ ನೆರವಾಗಲು ICT ನ್ನು ಬಳಸುವುದು**:ಪಠ್ಯಕ್ರಮದ ನಿರ್ಧಿಷ್ಟ ಕ್ಷೇತ್ರಗಳನ್ನು ಬೆಂಬಲಿಸಲು ICTನ್ನು ಬಳಸಬಹುದು. ಧ್ವನಿಮುದ್ರಣ ಸಾಮಾಗ್ರಿಗಳು ಬಾಷಾ ಬೋಧನೆಯನ್ನು ಶ್ರೀಮಂತಗೊಳಿಸುವುದು. ಮಾದರಿ ಚಿತ್ರಗಳು ವಿಜ್ಞಾನ ಪಾಠವನ್ನು ಸಮೃದ್ಧಗೊಳಿಸುವುದು. ವಿದ್ಯಾರ್ಥಿಗಳು ಇಂಟರ್ನೆಟ್ ಬಳಸುವುದರಿಂದ ಅವರು ಸ್ವಯಂ ಸಂಶೋದನೆಯನ್ನು ಕೈಗೊಳ್ಳಲು ಅವಕಾಶ ದೊರೆಯುವುದು ಮತ್ತು ತಮ್ಮ ಆಸಕ್ತಿದಾಯಕ ವಿಷಯದಲ್ಲಿ ಆಳವಾಗಿ ಅಧ್ಯಯನ ಮಾಡಲು ಸಾಧ್ಯವಾಗುವುದು. ಅಷ್ಟೇ ಅಲ್ಲದೆ ವಿದ್ಯಾರ್ಥಿಗಳು ತಮ್ಮ ಆತ್ಮಗೌರವವನ್ನು ಬೆಳೆಸಿಕೊಳ್ಳುವರು.
- **ವೃತ್ತೀಪರ ಕಲಿಕೆಯನ್ನು ಬೆಂಬಲಿಸಲು ICT ಬಳಸುವುದು**.: ICT ನ್ನು ಶಿಕ್ಷಕರ ವೃತ್ತೀಪರತೆಯನ್ನು ಬೆಂಬಲಿಸಲು ಬಳಸಬಹುದು. ಶಿಕ್ಷಕರು ಒಟ್ಟಾಗಿ ತಂಡದಲ್ಲಿ ಕಾರ್ಯನಿರ್ವಹಿಸುವಂತೆ ಮಾಡಿ ತರಗತಿಗಳಲ್ಲಿ OERಗಳನ್ನು ಹೊಂದಿಸಿಕೊಂಡು ಅವುಗಳನ್ನು ಬಳಸುವ ಮಾರ್ಗಗಳನ್ನು ಕಂಡುಕೊಳ್ಳುವಲ್ಲಿ. ಅವರನ್ನು ಪ್ರೋತ್ಸಾಹಿಸಬೇಕು. ತಮ್ಮ ಬೋಧನೆಯನ್ನು ಪರಸ್ಪರ ಅಭಿವೃದ್ಧಿಗೊಳಿಸಲು ಶಿಕ್ಷಕರು ಇಬ್ಬರ ಒಂದು ತಂಡದಲ್ಲಿ ಜೊತೆಯಾಗಿ ಕಾರ್ಯನಿರ್ವಹಿಸಬಹುದು. ವಿಷಯ ಜ್ಞಾನದಲ್ಲಿ ಶಿಕ್ಷಕರು ಕೊರತೆಯನ್ನು ಎದುರಿಸಿದಾಗ ◌ೀ ಕೊರತೆಯನ್ನು ತುಂಬಿ ಶಿಕ್ಷಕರಿಗೆ ನೆರವಾಗಲು ಇಂಟರ್ನೆಟ್ ನಲ್ಲಿ ಬೃಹತ್ ಸಂಪನ್ಮೂಲಗಳನ್ನು ನಾವು ಕಾಣಬಹುದು. ಶಿಕ್ಷಕರು ಇಂಟರ್ನೆಟ್ ಬಳಸುವುದರಿಂದ ◌ೀತರೆ ಶಿಕ್ಷಕರೊಂದಿಗೂ ಕೂಡ ಅಂತರ್ಜಾಲದಲ್ಲಿ ಸಂವಹನ ಮಾಡಲು ಅವಕಾಶ ಲಭಿಸುವುದು ಹಾಗೂ ಚಟುವಟಿಕೆ 1 ರ ನಂತರ ಚರ್ಚೆಯಲ್ಲಿ ಗುರುತಿಸಲಾದ ಪ್ರಮುಖ ಕೌಶಲಗಳನ್ನು ಬೇಳೆಸಲೂ ಕೂಡ ನೆರವಾಗುವುದು.

## ಚಟುವಟಿಕೆ 4 : ತಂತ್ರಜ್ಞಾನ ಬಳಸುವುದರಲ್ಲಿ ಶಿಕ್ಷಕರಿಗೆ ನೆರವಾಗುವುದು

ಚಟುವಟಿಕೆ 1 ರ ಪ್ರಶ್ನಾವಳಿಯಿಂದ ನೀವು ನೀವು ರಚಿಸಿದ ಸಾರಾಂಶದ ಕಡೆಗೆ ಮತ್ತು ನೀವು ಪತ್ತೆ ಹಚ್ಚಿದ ಸವಾಲುಗಳ ಪಟ್ಟಿಯತ್ತ ಹಿಂದಕ್ಕೆ ಹೋಗಿ. ◌ೀದುವರೆಗೆ ನೀವು ಓದಿದ ಪ್ರಕರಣಗಳಿಂದ ಮತ್ತು ನಿರ್ವಹಿಸಿದ ಚಟುವಟಿಕೆಗಳಿಂದ ಹೊರಹೊಮ್ಮಿದ ಅಂಶಗಳಿಂದ ಶಿಕ್ಷಕರು ಲಭ್ಯ ತಂತ್ರಜ್ಞಾನವನ್ನು ಉತ್ತಮವಾಗಿ ಬಳಸಿಕೊಳ್ಳಲು ಅವರನ್ನು ಹೇಗೆ ಪ್ರೋತ್ಸಾಹಿಸುವಿರಿ?

ಮೇಲೆ ನೀಡಲಾದ ಪ್ರತಿಯೊಂದು ನಾಲ್ಕು ವಿಭಾಗಗಳಲ್ಲಿ ನಿಮ್ಮ ಶಾಲೆಯಲ್ಲಿ ಶಿಕ್ಷಕರೊಂದಿಗೆ ನೀವು ಕೈಗೊಳ್ಳಬಹುದಾದ ಒಂದು ಚಟುವಟಿಕೆಗೆ ನಿರ್ಧಿಷ್ಟ ಉದಾಹರಣೆಯೊಂದನ್ನು ಪತ್ತೆಹಚ್ಚಿ. TESS-ಇಂಡಿಯಾ ಶಿಕ್ಷಕ ಅಭಿವೃದ್ಧಿಯ OERಗಳು ತರಗತಿ ಕೋಣೆಯಲ್ಲಿ ICT ಬಳಸುವ ಅವಕಾಶಗಳನ್ನು ಎತ್ತಿ ಹಿಡಿಯುವುದು. ಹಾಗೂ ಈ ಅಂಶಗಳು ಬೋಧನಾ ಕೌಶಲಗಳನ್ನು ಅಭಿವೃದ್ಧಿಗೊಳಿಸಲು ಅಥವ ವಿಷಯದ ಕಲಿಕೆಯನ್ನು ಬೆಂಬಲಿಸಲು ಕೂಡ ICT ಬಳಸಿಕೊಳ್ಳುವಲ್ಲಿ ಕೆಲವೊಂದು ಚಿಂತನೆಗಳನ್ನು ನೀಡಬಹುದು.

# 4 ತಂತ್ರಜ್ಞಾನ, ಕೌಶಲಗಳು ಮತ್ತು ಕಲಿಕಾ ಉದ್ದೇಶಗಳನ್ನು ಜೋಡಿಸುವುದು

ಮುಂದಿನ ದಿನಗಳಲ್ಲಿ ಇಂಟರ್ನೆಟ್, ಕಂಪ್ಯೂಟರ್ ಮತ್ತು ಇತರೆ ಸಾಧನಗಳ ಬಳಕೆಯು ಹೆಚ್ಚು ಅಭಿವೃದ್ಧಿಯಾಗುವುದನ್ನು ಹೆಚ್ಚಾಗಿ ಆಶಯಿಸಲಾಗಿದೆ. ಹಾಗೂ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯಿಂದ ಹೊರಗೆ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ. ಶಾಲಾ ನಾಯಕರಾಗಿ ನಿಮ್ಮ ಪಾತ್ರವೇನೆಂದರೆ ನಿಮ್ಮ ಶಾಲೆಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಂತ್ರಜ್ಞಾನವನ್ನು ಬಳಸುತ್ತಿದ್ದಾರೆಂಬುದನ್ನು ಖಾತ್ರೀಪಡಿಸುವುದು. ನಿಮ್ಮ ಶೈಕ್ಷಣಿಕ ಉದ್ದೇಶಗಳನ್ನು ಒಟ್ಟಾಗಿ ಗುರಿಮುಟ್ಟುವುದಕ್ಕಾಗಿ ನೀವಿದನ್ನು ಮಾಡುವುದು ಅವಶ್ಯಕವಾಗಿದೆ.

ಒಂದು ಸಾಮಾನ್ಯ ತಪ್ಪು ಸಂಗತಿಯೇನೆಂದರೆ ನಾವು ತಂತ್ರಜ್ಞಾನದಿಂದ ಏನು ಮಾಡಬೇಕೆಂದು ಅಂದುಕೊಂಡಿದ್ದೇವೆಯೋ ಅದನ್ನು ಕಡೆಗಣಿಸಿ ಕೇವಲ ತಂತ್ರಜ್ಞಾನ ಸಾಧನಗಳತ್ತ ನಮ್ಮ ಗಮನ ಕೇಂದ್ರೀಕರಿಸಿಬಿಡುವುದು ಮತ್ತು ಕಂಪ್ಯೂಟರ್ ನಿರ್ವಹಣೆಯ ಪ್ರಾಯೋಗಿಕ ತೊಂದರೆಗಳನ್ನು ಕಡೆಗಣಿಸುವುದು. ಶೈಕ್ಷಣಿಕ ಆದ್ಯತೆಗಳನ್ನು ನಾವು ಸ್ಪಷ್ಟಪಡಿಸಿದ ಆಧಾರದ ಮೇಲೆ ಅಗತ್ಯ ತ್ಂತ್ರಜ್ಞಾನವನ್ನು ನಾವು ಆಯ್ಕೆ ಮಾಡಿಕೊಂಡಲ್ಲಿ ಇವುಗಳು ಆದ್ಯತೆಗಳನ್ನು ಸಾಕಾರಗೊಳಿಸಲು ನೆರವಾಗುವುದು.

### ಪ್ರಕರಣ 5 : ಶ್ರೀ ಅಗರ್ ವಾಲ್ ರವರು ಹತಾಶರಾಗಿರುವರು.

ಶ್ರೀ ಅಗರ್ ವಾಲ್ ರವರು ಇತ್ತೀಚೆಗೆ ಒಂದು ಹೊಸ ಶಾಲೆಯಲ್ಲಿ ಕೆಲಸಕ್ಕೆ ಸೇರಿದ್ದರು. ಜಿಲ್ಲಾ ಶಿಕ್ಷಣಾಧಿಕಾರಿಗಳಿಂದ ಅವರು ಸ್ಥಳನಿಯೋಕ್ತಗೊಂಡಿದ್ದರು ಮತ್ತು ಶಾಲೆಯು ಕಂಪ್ಯೂಟರ್ ನಿಂದ ಉತ್ತಮವಾಗಿ ಸಜ್ಜುಗೊಂಡಿರುವುದಾಗಿ ಅವರಿಗೆ ಹೇಳಲಾಗಿತ್ತು.

ಹೊಸ ಶಾಲೆಯಲ್ಲಿ ಕೆಸವನ್ನಾರಂಭಿಸಲು ನಾನು ತುಂಬಾ ಉತ್ಸುಕನಾಗಿದ್ದೆನು. ವಿದ್ಯಾರ್ಥಿಗಳಿಗೆ ಬಳಸಲು 25 ಲ್ಯಾಪ್ ಟಾಪ್ ಗಳು ಶಾಲೆಯಲ್ಲಿ ಲಭ್ಯವಿರುವುದೆಂದು ನನಗೆ ತಿಳಿಸಿದ್ದರು. ಆದರೆ ನಾನು ಶಾಲೆಗೆ ಬಂದಾಗ ಲ್ಯಾಪ್ ಟಾಪ್ ಗಳನ್ನು ಒಂದು ಅಲಮಾರುವಿನಲ್ಲಿ ಇಟ್ಟು ಬೀಗ ಹಾಕಿರುವುದನ್ನು ನಾನು ನೋಡಿದೆನು. ಬಹಳ ದಿನಗಳಿಂದ ಯಾರೊಬ್ಬರೂ ಅವುಗಳನ್ನು ಬಳಸಿರಲಿಲ್ಲ. ಅಲಮಾರುವಿಗೆ ಒಂದೇ ಒಂದು ಬೀಗದ ಕೀಲಿ ಇತ್ತು ಅದೂ ಶಾಲಾ ನಾಯಕನ ಕಛೇರಿಯಲ್ಲಿತ್ತು. ಶಾಲಾ ನಾಯಕರು ಶಾಲೆಯಿಂದೇನಾದರೂ ಹೊರಗಿದ್ದರೆ ಯಾರಿಗೂ ಬೀಗದ ಕೀಲಿ ಸಿಕ್ಕುವುದಿಲ್ಲ.

ಕಂಪ್ಯೂಟರುಗಳು ಹಳೆಯದಾಗಿದ್ದು ನಿಧಾನವಾಗಿತ್ತು. ಕೆಲವಕ್ಕೆ ಮೌಸ್ ಗಳಿರಲಿಲ್ಲ. ಕೆಲವು ಕಂಪ್ಯೂಟರುಗಳ ಕೀ ಬೋರ್ಡುಗಳು ಹಾನಿಗೊಂಡಿದ್ದುವು. ಕೆಲವುಗಳ ಚಾರ್ಜರುಗಳು ಕಳೆದುಹೋಗಿದ್ದುವು. ಕೆಲಸ ಮಾಡುತ್ತಿದ್ದ ಕೆಲವು ಕಂಪ್ಯೂಟರುಗಳಿಗೆ ವರ್ಡ, ಎಕ್ಸೆಲ್ ಮತ್ತು ಪವರ್ ಪಾಯಿಂಟ್ ಮತ್ತು ಸಿಡಿ-ಡ್ರೈವ್ ಇದ್ದುವು. . ಶೈಕ್ಷಣಿಕ ಸಾಫ್ಟವೇರ್ ಇರುವ ಕೆಲವು ಸಿಡಿ-ರೋಮ್ ಗಳು ಅಲ್ಲಿದ್ದುವು. ಆದರೆ ಕಂಪ್ಯೂಟರುಗಳಿಗೆ ನೆಟ್ ವರ್ಕ ಇರಲಿಲ್ಲ. ಆದ್ದರಿಂದ ಸಿಡಿ -ರೋಮ್ ಗಳನ್ನು ಪ್ರತ್ಯೇಕವಾಗಿ ಪ್ರತಿ ಕಂಪ್ಯೂಟರ್ ಗೆ ಅಳವಡಿಸಬೇಕಿತ್ತು. ಕೆಲವುಗಳ ಪರವಾನಗಿ ಕೋಡ್ ಸಂಕೇತಗಳು ಕಳೆದುಹೋಗಿದ್ದುವು ಇದರಿಂದ ಸಿಡಿ-ರಾಮ್ ಗಳು ಇದರಲ್ಲಿ ತೆರೆದುಕೊಳ್ಳುತ್ತಿರಲಿಲ್ಲ. ಹಳೆಯ ಕೆಲವು ವಿದ್ಯಾರ್ಥಿಗಳು ಲ್ಯಾಪ್ ಟಾಪ್ ನ್ನು ಬಳಸಲು ತಿಳಿದಿದ್ದರು. ಆದರೆ ಅವರು ಇದರ ಬಗ್ಗೆ ಹೆಚ್ಚಿನ ವಿಷಯಗಳನ್ನು ತಾವು ಕಲಿತಿಲ್ಲವೆಂದು ನನಗೆ ತಿಳಿಸಿದರು ಏಕೆಂದರೆ ಶಿಕ್ಷಕರಿಗೆ ಕಂಪ್ಯೂಟರ್ ನ್ನು ಹೇಗೆ ಬಳಸುವುದು ಎಂಬುವುದು ನಿಜವಾಗಿಯೂ ಅವರಿಗೆ ತಿಳಿದಿರಲಿಲ್ಲ.

ಈ ಪರಿಸ್ಥಿತಿಯು ಸಾಮಾನ್ಯವಾಗಿ ಎಲ್ಲಿಯೂ ಕಂಡುಬರದ ವಿಷಯವೇನಲ್ಲ. ಶಾಲೆಯಲ್ಲಿ ಕಂಪ್ಯೂಟರ್ ಗಳ ನಿರ್ವಹಣೆಯನ್ನು ಯೋಜಿಸುವುದಕ್ಕೆ ಯಾವುದೇ ಚಿಂತನೆಗಳನ್ನು ಮಾಡಿರುವುದಿಲ್ಲ. ಉಪಕರಣಗಳು ತನ್ನಷ್ಟಕ್ಕೆ ತಾನೇ ನೋಡಿಕೊಳ್ಳುವುದಿಲ್ಲ. ಮತ್ತು ಬಳಕೆದಾರರಿಗೆ ಕಂಪ್ಯೂಟರ್ ನ್ನು ಹೇಗೆ ಬಳಸಬೇಕೆಂಬುವುದರ ಅರಿವು ಇರುವುದಿಲ್ಲ. ನಿರ್ವಹಣೆ ಮತ್ತು ಬೆಂಬಲದ ಕುರಿತು ಹೆಚ್ಚಿನ ಮಾಹಿತಿಗಾಗಿ ನಾಲ್ಕನೇ ಸಂಪನ್ಮೂಲವನ್ನು ನೋಡಿ.

## ಚಟುವಟಿಕೆ 5: ತಂತ್ರಜ್ಞಾನವನ್ನು ಕಲಿಕೆಗೆ ಜೋಡಿಸುವುದು

ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಕೆಳಗೆ ನೀಡಲಾಗಿರುವ ಪಟ್ಟಿ 1ನ್ನು ಪೂರ್ಣಗೊಳಿಸಿ. ಈ ಅಭ್ಯಾಸದ ಉದ್ದೇಶವೇನೆಂದರೆ ತಂತ್ರಜ್ಞಾನವನ್ನಷ್ಟೇ ನೇರವಾಗಿ ನೋಡದೆ ತಂತ್ರಜ್ಞಾನದ ಶೈಕ್ಷಣಿಕ ಉಪಯೋಗಗಳತ್ತ ನಿಮ್ಮ ಗಮನವನ್ನು ಕೇಂದ್ರೀಕರಿಸುವಂತೆ ಪ್ರೋತ್ಸಾಹಿಸುವುದು.

**ಪಟ್ಟಿ 1** ನಿಮ್ಮ ಶಾಲೆಯಲ್ಲಿ ತಂತ್ರಜ್ಞಾನದ ಪ್ರಯೋಜನಗಳನ್ನು ಗುರುತಿಸುವುದು.

| ಶೈಕ್ಷಣಿಕ ಫಲಿತಾಂಶಗಳು | ತಂತ್ರಜ್ಞಾನವು ಹೇಗೆ ನೆರವಾಗುವುದು? ಯಾವ ತಾಂತ್ರಿಕ ಅಂಶಗಳು ಅಗತ್ಯವಿದೆ. |
|---|---|
| ಕಲಿಕಾ ಪ್ರಕ್ರಿಯೆಗಳಲ್ಲಿ ಶಿಕ್ಷಕರು ಹೆಚ್ಚಾಗಿ ಭಾಗವಹಿಸುವಿಕೆಯ ಕ್ರಮವನ್ನು ಬಳಸುತ್ತಾರೆ. | |
| ಶಿಕ್ಷಕರು ತಾವು ಒಬ್ಬ ಕಲಿಕೆಯ ಸುಗಮಕಾರರಾಗಿ, ಮಕ್ಕಳ ಕಲಿಕಾ ಪ್ರಯಾಣದಲ್ಲಿ ಅವರಿಗೆ ಮಾರ್ಗದರ್ಶಿಗಳಾಗಿ ನೆರವು ನೀಡುವರು. | |
| ಶಿಕ್ಷಕರು ತಾವೂ ಒಬ್ಬ ಕಲಿಕಾರ್ಥಿಯೆಂದು ತಮ್ಮನ್ನು ಪರಿಗಣಿಸಿಕೊಂಡು ತಮ್ಮ ವೃತ್ತೀ ಬೆಳವಣಿಗೆಯತ್ತ ಹೆಚ್ಚು ಕಾಳಜಿ ವಹಿಸುವರು | |
| ವಿದ್ಯಾರ್ಥಿಗಳು ಕಂಪ್ಯೂಟರ್ ಬಳಸುವ ಮೂಲ ಸಾಮರ್ಥ್ಯಗಳನ್ನು ಕಲಿಯುವರು: ಸ್ವಿಚ್ ಆನ್ ಮಾಡುವುದು, ಕಡತ ನಿರ್ವಹಿಸುವುದು, ದಾಕ್ಯುಮೆಂಟ್ ಗಳನ್ನು ಪಿಪಿಟಿಗಳನ್ನು ನಿರ್ಮಿಸುವುದು | |
| ವಿದ್ಯಾರ್ಥಿಗಳು ಇಂಟರ್ನೆಟ್ ನಲ್ಲಿ ಮಾಹಿತಿಗಳನ್ನು ಹುಡುಕಿಕೊಂಡು ತಮ್ಮ ಮುಂದಿನ ಬಳಕೆಗಾಗಿ ಅವುಗಳನ್ನು ಸಂಗ್ರಹಿಸಿಡುತ್ತಾರೆ. | |
| ವಿದ್ಯಾರ್ಥಿಗಳು ಇ-ಮೇಲ್ ಸಂದೇಶಗಳನ್ನು ಹೇಗೆ ಕಳುಹಿಸುವುದೆಂದುದನ್ನು ಕಲಿಯುವರು ಮತ್ತು ಸಾಮಾಜಿಕ ಜಾಲತಾಣಗಳನ್ನು ಬಳಸುವರು | |

| | |
|---|---|
| ಶಿಕ್ಷಕರು ಶೈಕ್ಷಣಿಕ ಅನ್ವಯಗಳ ಸಾಫ್ಟವೇರ್ ಗಳಾದ ವೀಡಿಯೋ ಪಾಠಗಳನ್ನು(simulations) ಬಳಸುವುರು | |
| ತರಗತಿ ಪಾಠವನ್ನು ಹೆಚ್ಚು ಜೀವಂತಿಕೆಗೊಳಿಸುವ ಯು-ಟ್ಯೂಬ್ ವೀಡಿಯೋಗಳು, ಚಿತ್ರಗಳು, ಸಮಾಚಾರ ಸುದ್ಧಿಗಳು, ಚಾಯಾಚಿತ್ರಗಳು ಮುಂತಾದ ಸಂಪನ್ಮೂಲಗಳನ್ನು ಶಿಕ್ಷಕರು ಬಳಸುವರು | |

## ಪ್ರಕರಣ 6 ಶ್ರೀಮತಿ ನಾಗರಾಜುರವರು ದೇಣಿಗೆಯನ್ನು ಸ್ವೀಕರಿಸಿರುವುದು

ಶ್ರೀಮತಿ ನಾಗರಾಜುರವರು ಒಂದು ಸಣ್ಣ ಗ್ರಾಮೀಣ ಮಾಧ್ಯಮಿಕ ಶಾಲೆಯ ಶಾಲಾ ನಾಯಕರು. ಆ ಶಾಲೆಯ ಹಳೆಯ ವಿದ್ಯಾರ್ಥಿಯೊಬ್ಬ ಿತ್ತೀಚೆಗೆ ಈ ಹಳ್ಳಿಗೆ ಬಂದಿದ್ದರು. ಇವರು ತಮ್ಮ ಉದ್ಯೋಗದಲ್ಲಿ ಯಶಸ್ವಿಯಾಗಿ ಹಣವಂತರಾಗಿದ್ದರು. ಶ್ರೀಮತಿ ನಾಗರಾಜುರವರನ್ನು ಬೇಟಿಯಾಗಲು ಬಂದಿದ್ದರು

ಕಳೆದ ವಾರ ನಾನೊಬ್ಬ ಹಳೇ ವಿದ್ಯಾರ್ಥಿಯನ್ನು ಬೇಟಿಯಾದೆ. ಶಾಲೆಯನ್ನು ಬಿಟ್ಟ ನಂತರ ತಾನೇನು ಮಾಡಿದನೆಂದು ನನಗೆ ಇವರು ಹೇಳಿದರು: ತಾನೊಂದು ವ್ಯವಹಾರವನ್ನು ಸ್ಥಪಿಸಿದ್ದಾಗಿಯೂ ಹಾಗೂ ಇತ್ತೀಚೆಗೆ ಈ ವ್ಯವಹಾರವು ದೊಡ್ಡ ಪ್ರಮಾಣದಲ್ಲಿ ಬೆಳೆದು ತಾನು ಸಾಕಷ್ಟು ಹಣ ಗಳಿಸಿರುವುದಾಗಿ ತಿಳಿಸಿದರು. ಶಾಲೆಗೆ ಏನಾದರೂ ಹಿಂತಿರುಗಿ ನೀಡಬೇಕೆಂದು ಇವರಿಗೆ ಬಹಳ ಕಾಳಜಿ ಇತ್ತು, ವಿದ್ಯಾರ್ಥಿಗಳ ಉಪಯೋಗಕ್ಕೆಂದು ಸುಮಾರು 20 ಕಂಪ್ಯೂಟರುಗಳ ಸುಸಜ್ಜಿತ ಪ್ರಯೋಗಾಲಯವನ್ನು ಈ ಶಾಲೆಗೆ ನೀಡಲು ಅವರು ಮುಂದೆ ಬಂದರು.

ನನಗೆ ತುಂಬಾ ಸಂತೋಷವಾಯಿತು ಆದರೆ ಜೊತೆಯಲ್ಲಿ ಆತಂಕವೂ ಪ್ರಾರಮಭವಾಯಿತು. ನನ್ನ ಬಳಿ ೮ ಜನ ಶಿಕ್ಷಕರಿದ್ದಾರೆ ಮತ್ತು ಈ ರೀತಯ ಪ್ರಯೋಗಾಲಯವನ್ನು ನೋಡಿಕೊಳ್ಳು ಯಾರೊಬ್ಬರಿಗೂ ಜ್ಞಾನವಾಗಲಿ ಕೌಶಲವಾಗಲಿ ಇಲ್ಲ. ಕೆಲವರಿಗಂತೂ ಕಂಪ್ಯೂಟರ್ ಬಳಸಲಿಕ್ಕೆ ಬರುವುದೇ ಇಲ್ಲ. ಶೈಕ್ಷಣಿಕ ಸಾಫ್ಟವೇರ್ ಗಳನ್ನು ಕೊಂಡುಕೊಳ್ಳಲು ನಮ್ಮ ಬಳಿ ಸಂಪನ್ಮೂಲವಿಲ್ಲ. ಅಥವಾ ಕೊಂಡುಕೊಂಡರೂ ಕೂಡ ಅವುಗಳ ಉತ್ತಮ ಬಳಕೆಗೆ ಕಂಪ್ಯೂಟರ್ ಗಳನ್ನು ಸೂಕ್ತ ರೀತಿಯಲ್ಲಿ ನೆಟ್ ವರ್ಕಿಂಗ್ ಮಾಡುವುದು ಅವಶ್ಯ. ಆದ್ದರಿಂದ ನಾನು ಲ್ಯಾಪ್ ಟಾಪ್ ಪ್ರೊಜೆಕ್ಟರ್ ಹಾಗೂ ವೈ-ಫೈ ಸಂಪರ್ಕ ಗಳನ್ನು ಪಡೆಯಲು ನಾನು ಆದ್ಯತೆ ನೀಡಿದೆ. ಆದರೆ ಅವರು ತಂತ್ರಜ್ಞಾನ ಕೊಠಡಿಯನ್ನು ಶಾಲೆಯಲ್ಲಿ ತನ್ನ ಹೆಸರಲ್ಲಿ ಸ್ಥಾಪಿಸುವ ಬಗ್ಗೆ ಹೆಚ್ಚು ಕಾಳಜಿ ತೋರಿದರು. - 'ಲಾಲ್ ಟಾನಿ ಕಂಪ್ಯೂಟರ್ ಕೊಠಡಿ'

ನಾನು ಅವರಿಗೆ ಧನ್ಯವಾದಗಳನ್ನು ಸಲ್ಲಿಸಿ ಮಾರನೇ ದಿನ ಮತ್ತೇ ಶಾಲೆಗೆ ಬರಲು ತಿಳಿಸದೆ. ಈ ಕಾರ್ಯವನ್ನು ಸರಿಯಾಗಿ ಜಾರಿಗೊಳಿಸುವುದರ ಕುರಿತು ತಾನು ಆಲೋಚಿಸಬೇಕೆಂಬುವುದು ಹಾಗೂ ಈ ಒಂದು ಅದ್ಭುತ ಕಾರ್ಯದ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಬೇಕೆಂದು ನಾನು ಅವರಿಗೆ ಹೇಳಿದೆ. ಶ್ರೀ. ಭಢ್ವಾರವರು ೯ ನೇ ತರಗತಿಗೆ ಪಾಠ ಮಾಡುತ್ತಾರೆ ಮತ್ತು ಅವರು ಪಟ್ಟಣದಲ್ಲಿರುವಾಗ ತಮ್ಮ ಮೊಬೈಲ್ ಪೋನ್ ನಲ್ಲಿ ಇಂಟರ್ನೆಟ್ ಬಳುಸುವರೆಂದು ನನಗೆ ತಿಳಿದಿತ್ತು. ನನ್ನ ಬಳಿ ಲ್ಯಾಪ್ ಟಾಪ್ ಇದೆ. ನಾನು ಮತ್ತು ಭಢ್ವಾರವರು ಒಂದು ಯೋಜನೆಯನ್ನು ಮಾಡಬಹುದೆಂದು ನಾನು ಕಂಡುಕೊಂಡೆ. ಶ್ರೀ ಭಢ್ವಾರವರು ಪರಮಾಣು ರಚನೆಯ ಬಗ್ಗೆ ಪಾಠ ಮಾಡುತ್ತಿದ್ದರು, ಆದ್ದರಿಂದ ಪಟ್ಟಣದಲ್ಲಿ ಸಂಜೆ ನಾವು ಅವರ ಸ್ನೇಹಿತರ ಮನೆಗೆ ಹೋದವು ಅವರ ಮನೆಯಲ್ಲಿ ವೈ-ಫೈ ಸಂಪರ್ಕವಿತ್ತು. ವೆಬ್ ಸೈಟ್ ನಿಂದ '10

ರಘಾತಗಳು' ವಿಷಯವನ್ನು ನಾವು ಡೌನ್ ಲೋಡ್ ಮಾಡಿಕೊಂಡೆವು ಇದರಿಂದ ಮಕ್ಕಳಿಗೆ ಪರಮಾಣು ಮತ್ತು ನ್ಯೂಕ್ಲಿಯಸ್ ಗಳ ಸಾಪೇಕ್ಷ ಗಾತ್ರವನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುವುದು.

ಮಾರನೇ ದಿನ ಶ್ರೀ. ಭಢ್ಲಾರವರು 9ನೇ ತರಗತಿಗೆ ಪಾಠ ಮಾಡುವಾಗ ನನ್ನ ಲ್ಯಾಪ್ ಟಾಪ್ ನ್ನು ಬಳಸಿ ಮಕ್ಕಳಿಗೆ ಚಿತ್ರವನ್ನು ತೋರಿಸಿದರು. ಮಕ್ಕಳು ತುಂಬಾ ಅಚ್ಚರಿ ಪಟ್ಟು ಆನಂದಿಸಿದರು. ಅವರು ನೆಲದ ಮೇಲೆ ಕುಳಿತುಕೊಳ್ಳಬೇಕಿತ್ತು - ಹೆಚ್ಚಿನವರಿಗೆ ಕಾಣಿಸುತ್ತಿತ್ತು. ಕೊಠಡಿಯಲ್ಲಿ ಗಲಿಬಿಲಿಯ ವಾತಾವರಣವಿರುತ್ತಿತ್ತು. ನಾನು ಶ್ರೀ ಲಾಲ್ ರವರನ್ನು ಕೊಠಡಿಗೆ ಕರೆದುಕೊಂಡು ಹೋದೆ ತರಗತಿಯು ಅವರ ಮೇಲೆ ತುಂಬಾ ಪ್ರಭಾವ ಬೀರಿತು. ಇದು ನಾನು ಅವರಿಗೆ ತಮ್ಮ ಶಾಲೆಗೆ ನಿಜವಾಗಿಯೂ ಯಾವುದರ ಅಗತ್ಯವಿದೆ ಎಂದು ವಿವರಿಸಲು ನನಗೆ ಸಾಧ್ಯವಾಯಿತು -ಬಹುಷಃ ಎಲ್ಲಾ ಶಿಕ್ಷಕರಿಗೊಂದು ಲ್ಯಾಪ್ ಟಾಪ್, ತರಗತಿಗೊಂದು ಪ್ರೊಜೆಕ್ಟರ್ ಮತ್ತು ವೈ-ಫೈ ಸಂಪರ್ಕ. ಅಥವ ಶೈಕ್ಷಣಿಕ ಸಾಧನಗಳನ್ನು ಅಥವ ಸಾಫ್ಟವೇರ್ ಗಳನ್ನು ಮೊದಲೇ ಲೋಡ್ ಮಾಡಲಾಗಿರುವ ಟ್ಯಾಬ್ ಲೆಟ್ ಸೆಟ್ ಗಳು. ಎಲ್ಲಾ ಹಣವನ್ನು ಶಾಲೆಗೆ ಒಂದೇ ಬಾರಿಗೆ ವಿನಿಯೋಗಿಸುವುದಕ್ಕಿಂತ ಸ್ವಲ್ಪ ಹಣವನ್ನು ಸಾಧನ ಸಲಕರಣಗಳಿಗೆ ಮತ್ತು 5 ವರ್ಷಗಳ ಅವಧಿಗೆ ವೈ-ಫೈ ಸಂಪರ್ಕಕ್ಕಾಗಿ ನೀಡಬಹುದೆಂದು ಸಲಹೆ ನೀಡಿದೆ. ಶಾಲೆಯ ಪ್ರವೇಶ ಸ್ಥಳದಲ್ಲಿ ಒಂದು ಫಲಕವನ್ನು ಅಳವಡಿಸಿ ಅವರ ಅಪೂರ್ವ ಕೊಡುಗೆಗಾಗಿ ಧನ್ಯವಾದಗಳನ್ನು ತಿಳಿಸುವುದಾಗಿ ನಾನು ಅಭಿಪ್ರಾಯ ಪಟ್ಟೆ.

ನಾವು ಆಯ್ಕ ಮಾಡುವ ತಂತ್ರಜ್ಞಾನಗಳು ಯಾವ ಒಂದು ಶೈಕ್ಷಣಿಕ ಫಲಿತಾಂಶವನ್ನು ತಲುಪಲು ನಾವು ಅಪೇಕ್ಷೆ ಪಟ್ಟಿರುತ್ತೇವೆಯೋ ಅದನ್ನು ಸಾಕಾರಗೊಳಿಸುವಂತಿರಬೇಕೆಂಬುವುದನ್ನು ಚಟುವಟಿಕೆ 5 ಮತ್ತು ಪ್ರಕರಣ 6 ನಮಗೆ ಪ್ರಮುಖವಾಗಿ ತಿಳಿಸಿಕೊಡುವುದು. ಕೆಲವೊಮ್ಮೆ, ತರಗತಿಯಲ್ಲಿ ಒಂದು ಸರಳವಾದ ಲ್ಯಾಪ್ ಟಾಪ್ ಮತ್ತು ಒಂದು ಪ್ರೊಜೆಕ್ಟರ್ ಮಕ್ಕಳಿಗೆ ಹಲವು ಲ್ಯಾಪ್ ಟಾಪ್ ಕೊಡುವುದಕ್ಕಿಂತಲೂ ಅನೇಕ ಮಕ್ಕಳ ಮೇಲೆ ಉತ್ತಮ ಪರಿಣಾಮವನ್ನುಂಟುಮಾಡುವುದು. ಟ್ಯಾಬ್ ಲೆಟ್ ಗಳ ಬೆಲೆಯಲ್ಲಿ ತುಮಬಾ ಇಳಿತವಾಗಿರುವುದರಿಂದ ಅವುಗಳಿಂದಲೂ ನಾವು ಪ್ರಯೋಜನ ಪಡೆಯಬಹುದು. ಸ್ಥಳೀಯ ಉಪಕ್ರಮಗಳು ತಂತ್ರಜ್ಞಾನವನ್ನು ಕಡಿಮೆ ವೆಚ್ಚದಲ್ಲಿ ತಯಾರಿಸಬಲ್ಲುದು.

## ಚಟುವಟಿಕೆ 6 ಇಂಟರ್ನೆಟ್ ಮೇಲೆ ಉಪನ್ಯಾಸಗಳು

ಈ ಚಟುವಟಿಕೆಗೆ ನಿಮ್ಮ ಬಳಿ ಇಂಟರ್ನೆಟ್ ಇರಬೇಕು ಇದರಿಂದ ನೀವು “ಡಿಜಿಟಲ್ ಸಮನ್ವಯ” ಕುರಿತು ವಿನಯ್ ವೆಂಕಟರಾನ್ ರವರ ಒಂದು ಪಿಪಿಟಿ ಮಂಡನೆಯನ್ನು ನೋಡಬಹುದು (http://www.ted.com/talks/vinay_venkatraman_technology_crafts_for_the_digitally_underserved). TED ವೆಬ್ ಸೈಟ್ ನಲ್ಲಿರುವ ಸಂಪನ್ಮೂಲಗಳು ಮುಕ್ತ ವಿಷಯಗಳಿಗೆ ಒಂದು ಉದಾಹರಣೆಯಾಗಿದೆ. ಇವುಗಳನ್ನು ನಿಮ್ಮದೇ ಅಭಿವೃದ್ಧಿಗಾಗಿ ಅಥವ ಶಿಕ್ಷಕ ತರಬೇತಿಗಳಿಗಾಗಿ ಅಥವ ವಿದ್ಯಾರ್ಥಿಗಳೊಂದಿಗೆ ತಮ್ಮ ಆಲೋಚನೆಗಳನ್ನು ವಿಸ್ತರಿಸಿಕೊಳ್ಳಲು ಮತ್ತು ನವೀನ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ನೀವು ಬಳಸಬಹುದು. TED ಮಾತುಗಳು ಹೆಚ್ಚು ಪ್ರೇರಣಾದಾಯಕವಾಗಿರುವುದು, ಆತ್ಮಸ್ಥೈರ್ಯವನ್ನು ತುಂಬುವುದು ಹಾಗೂ ಒಳ್ಳೆಯ ಆಲೋಚನೆಗಳಿಗೆ ಒಳನೋಟವನ್ನು ತರುವುದು.

### ಚಿಂತನೆಗಳಿಗೆ ವಿರಾಮ

ಚಟುವಟಿಕೆ ೬ರಲ್ಲಿನ ವೀಡಿಯೋ ಚಿತ್ರಕ್ಕೆ ನಿಮ್ಮ ಪ್ರತಿಕ್ರಿಯೆಯೇನು? ನಿಮ್ಮ ಸ್ಥಳೀಯ ಸಮುದಾಯದ ಕುರಿತು ಚಿಂತಿಸುತ್ತಾ ICT ನಲ್ಲಿರುವ ನಿಮ್ಮ ಕೆಲವು ಸವಾಲುಗಳಿಗೆ ಯಾರಾದರೂ ನಿಮಗೆ ಸರಳ ಪರಹಾರವನ್ನು ನೀಡಬಲ್ಲ ವ್ಯಕ್ತಿಗಳಿದ್ದಾರೆಯೇ?

ನೀವಿಲ್ಲಿ BRCK ಬಗ್ಗೆ ಹೆಚ್ಚಿನದನ್ನು ಓದಬಹುದು:

https://www.kickstarter.com/projects/1776324009/brck-your-backup-generator-for-the-internet

ಕೊನೆಯ ಪ್ರಕರಣಗಳು ತಂತ್ರಜ್ಞಾನದ ಕೆಲವೊಂದು ಶೈಕ್ಷಣಿಕ ಲಾಭಗಳು ಮತ್ತು ಈ ಲಾಭಗಳನ್ನು ಶಿಕ್ಷಕರು ಮನವರಿಕೆ ಮಾಡಿಕೊಳ್ಳುವುದರಲ್ಲಿ ಅವರ ಪಾತ್ರವೇನಿದೆಂಬುವುದರ ಮೇಲೆ ಬೆಳಕು ಚೆಲ್ಲುವುದು.

## ಪ್ರಕರಣ ಅಧ್ಯಯನ – 7 : ಮೂರು ಶಾಲೆಗಳಲ್ಲಿ ಸ್ಥಳೀಯ ವಿಷಯದ ಅಭಿವೃದ್ಧಿ

ಈ ಯೋಜನೆಯನ್ನು 2005ರ ನವೆಂಬರ್ ತಿಂಗಳಿನಲ್ಲಿ ಆರಂಭಿಸಲಾಯಿತು. ವಿದ್ಯಾರ್ಥಿಗಳು ತಮ್ಮ ಇಷ್ಟದ ವಿಷಯದ ಮೇಲೆ ಕಂಪ್ಯೂಟರ್ ಆಧರಿತ ವಿಡಿಯೊ ಪ್ರದರ್ಶನ (ಪ್ರೆಸೆಂಟೇಶನ್) ಮಾಡುವ ಅವಕಾಶವನ್ನು 5, 6 ಹಾಗೂ 7ನೇ ತರಗತಿ ಮಕ್ಕಳಿಗೆ ಒದಗಿಸಲಾಯಿತು.

ಈ ಕೆಲಸ ನಿರ್ವಹಿಸುವ ಪ್ರತಿಯೊಂದು ಗುಂಪಿಗೂ ನೆರವಾಗುವ ಹೊಣೆಯನ್ನು ಶಿಕ್ಷಕರಿಗೆ ನೀಡಿ, ಅವರನ್ನು ಪ್ರೇರಕರನ್ನಾಗಿ ನಿಯೋಜಿಸಲಾಯಿತು. ಸ್ಥಳೀಯ ವಿಷಯದ ಅಭಿವೃದ್ಧಿ ಯೋಜನೆ ರೂಪಿಸಲು ಸಮುದಾಯದಲ್ಲಿರುವ ಅನುಭವಿಯೊಬ್ಬರನ್ನು ಮಾರ್ಗದರ್ಶಕರಂತೆ ಮಾಡಲಾಯಿತು. ಈ ಯೋಜನೆಯಲ್ಲಿ ಹಳ್ಳಿಯ ಜನರನ್ನು ಪಾಲ್ಗೊಳ್ಳುವಂತೆ ಮಾಡಲು ಕಲಿಕಾ ಸಮಿತಿಗಳನ್ನು ಶಾಲೆಯಲ್ಲಿ ಸ್ಥಾಪಿಸಲಾಯಿತು. 'ಯಂಗ್ ಇಂಡಿಯಾ ಫೆಲೋ' (ವೈಐಎಫ್) ಲಭ್ಯವಿದ್ದ ಕಡೆಯಲ್ಲಿ ಅವರನ್ನು ಈ ತಂಡಗಳಿಗೆ ನೆರವು ನೀಡುವಂತೆ ಮಾಡಲಾಯಿತು. ಪ್ರತಿಯೊಂದು ತಂಡಕ್ಕೂ ವೆಬ್‌ಕ್ಯಾಮೆರಾ ಹಾಗೂ ಎಂಎಸ್ ಪೇಂಟ್ ಮತ್ತು ಪವರ್‌ಪಾಯಿಂಟ್‌ನಂಥ ಅಪ್ಲಿಕೇಶನ್‌ಗಳ ಸೌಲಭ್ಯ ಕಲ್ಪಿಸಲಾಯಿತು.

ವಿದ್ಯಾರ್ಥಿಗಳು ಮಾದರಿಯನ್ನು ವಿನ್ಯಾಸ ಮಾಡಿದರು, ಅಗತ್ಯ ಮಾಹಿತಿಯನ್ನು ಸಂಗ್ರಹಿಸಿದರು ಹಾಗೂ ಕಂಪ್ಯೂಟರ್‌ನಲ್ಲಿ ಪಠ್ಯದ ಮಾಹಿತಿಯನ್ನು ಸಿದ್ಧಪಡಿಸಿದರು.

ಈ ಯೋಜನೆಯು ಮೂರು ಶಾಲೆಗಳಲ್ಲಿ ನಡೆಯಿತು. ಈ ಪೈಕಿ ಒಂದರಲ್ಲಿ ಅತ್ಯಂತ ಹೆಚ್ಚು ಯಶಸ್ವಿಯಾಯಿತು. ಇದಕ್ಕೆ ಪ್ರಮುಖ ಕಾರಣಗಳೆಂದರೆ;

ವಿದ್ಯಾರ್ಥಿಗಳಿಗೆ ಅವರಿಗೆ ಇಷ್ಟವೆನಿಸಿದ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಯಿತು.

ಹೇಳುವ ಬದಲಿಗೆ ಶಿಕ್ಷಕರು ಪ್ರೇರಕರಾಗಿ ಕಾರ್ಯನಿರ್ವಹಿಸಿದರು ಹಾಗೂ ಮಾರ್ಗದರ್ಶನ ನೀಡಿ ಉತ್ತೇಜಿಸಿದರು.

ತಂಡಗಳಲ್ಲಿದ್ದಾಗ ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಹೇಗೆ ಕೆಲಸ ಮಾಡಬೇಕು ಎಂಬ ಬಗ್ಗೆ ವಿಶೇಷ ತರಬೇತಿ ಪಡೆದರು.

ಒಂದು ಶಾಲೆಯಲ್ಲಿ ವಿಷಯವನ್ನು ಪಠ್ಯಪುಸ್ತಕದಿಂದಲೇ ಆಯ್ಕೆ ಮಾಡಿಕೊಳ್ಳಲಾಗಿತ್ತು; ಆದರೆ ವಿಷಯ ಮಂಡನೆಯನ್ನು ಗಮನಿಸಿದಾಗ ಅದು ಪಠ್ಯದಿಂದ ಸಾಕಷ್ಟು ದೂರವೇನೂ ಹೋಗಿರಲಿಲ್ಲ.

ಒಟ್ಟಾರೆಯಾಗಿ ಈ ಯೋಜನೆಯು ವಿದ್ಯಾರ್ಥಿಗಳಿಗೆ ಪ್ರೇರಣೆಯನ್ನು ನೀಡುವಂತಿತ್ತು. ಈ ವಿಷಯ ಪ್ರದರ್ಶನಗಳು ಇತರ ವಿದ್ಯಾರ್ಥಿಗಳಿಗೂ ಲಭ್ಯವಾಗುವಂತಿದ್ದವು ಹಾಗೂ ಜ್ಞಾನ ಸೃಷ್ಟಿಯ ಉದ್ದೇಶ ಹೊಂದಿರುವ ಎನ್‌ಸಿಎಫ್–2005ರ ಪ್ರಮುಖ ಗುರಿಯೊಂದನ್ನು ಈಡೇರಿಸುವಂತಿದ್ದವು.

ಹಾಗಿದ್ದರೂ, ಮಕ್ಕಳ ಕುತೂಹಲ ಹಾಗೂ ಸೃಜನಶೀಲತೆಯನ್ನು ಹತ್ತಿಕ್ಕಿ, ಅವರ ಮೇಲೆ ಒತ್ತಾಯ ಹೇರದೇ ಸೂಕ್ತ ಮಾರ್ಗದರ್ಶನ ಹಾಗೂ ನೆರವು ನೀಡಲು ಶಿಕ್ಷಕರು ಮತ್ತು ಕಲಿಕಾ ಸಮಿತಿಗೆ ಸಮರ್ಪಕ ಮಾರ್ಗದರ್ಶನ ಸಿಗಬೇಕು ಎಂಬುದು ಅಂತಿಮವಾಗಿ ಕೇಳಿಬಂದ ಅಭಿಮತವಾಗಿತ್ತು.

(ಈ ಯೋಜನೆಯ ಸಂಪೂರ್ಣ ವರದಿಯನ್ನು ಇಲ್ಲಿ ಓದಬಹುದು:
http://www.azimpremjifoundation.org/pdf/LocalContent.pdf.)

# 5. ಐಸಿಟಿಗೆ ಕಾರ್ಯತಂತ್ರ ವಿಧಾನ ಅಭಿವೃದ್ಧಿಪಡಿಸುವುದು




ಚಿತ್ರ 4. ಇಂದು ಹಾಗೂ ನಾಳೆಯ ತಂತ್ರಜ್ಞಾನವನ್ನು

ಇಂದು ಹಾಗೂ ನಾಳೆಯ ತಂತ್ರಜ್ಞಾನಗಳನ್ನು ನಿರ್ವಹಿಸಲು ಬೇಕಾದ ಸಾಮರ್ಥ್ಯವನ್ನು ಶಿಕ್ಷಕರು ಹಾಗೂ ಮಕ್ಕಳಲ್ಲಿ ವೃದ್ಧಿಸಲು ಅಗತ್ಯ ಎನಿಸುವ ಆರು ಪ್ರಸ್ತುತ ಮಾರ್ಗಗಳನ್ನು ಶಿಕ್ಷಣದಲ್ಲಿ ಐಸಿಟಿ (ಕೇಂದ್ರೀಯ ಶೈಕ್ಷಣಿಕ ತಂತ್ರಜ್ಞಾನ ಸಂಸ್ಥೆ, 2013) ಪಠ್ಯಕ್ರಮ ಆಯ್ಕೆ ಮಾಡಿದೆ. ಈ ಆರು ದಾರಿಗಳು ಹೀಗಿವೆ:

1. **ಜಗತ್ತಿನ ಜತೆ ಸಂಪರ್ಕ:** ಮಾಹಿತಿ ಸಾಕ್ಷರತೆ– ಅಂದರೆ, ಕಲಿಕೆ ಹಾಗೂ ಬೋಧನೆಗೆ ಬೇಕಾದ ಮಾಹಿತಿ ಮತ್ತು ಸಂಪನ್ಮೂಲಗಳನ್ನು ಪಠ್ಯಪಸ್ತಕಗಳ ಆಚೆಯಿಂದಲೂ ಪಡೆಯಬಹುದು.
2. **ಪರಸ್ಪರ ಸಂಪರ್ಕ:** ವೃತ್ತಿಪರತೆ ಅಭಿವೃದ್ಧಿಗೆ ನೆರವು, ಸಾಮಾಜಿಕ ಜಾಲತಾಣದಂಥ ಮಾಧ್ಯಮಗಳ ನಿರ್ವಹಣೆ ಇತ್ಯಾದಿ
3. **ಐಸಿಟಿ ಸೃಷ್ಟಿ:** ಬೋಧನಾ ಸಂಪನ್ಮೂಲ, ದಾಖಲೀಕರಣ, ಶ್ರವಣ– ದೃಶ್ಯ ಸಾಮಗ್ರಿ ಅಭಿವೃದ್ಧಿಪಡಿಸಲು ಹಾಗೂ ಸೂಕ್ತ ಕಡತಗಳ ನಿರ್ವಹಣೆ ಮಾಡ'ಲು
4. **ಐಸಿಟಿ ಜತೆ ಸಂವಹನ:** ಬಳಕೆದಾರರ ಸಂಪರ್ಕ ಸಾಧನದ ಬಗ್ಗೆ ತಿಳಿದುಕೊಳ್ಳುವುದು ಹಾಗೂ ಸಮರ್ಪಕವೆನಿಸುವ ಸಲಕರಣೆ ಆಯ್ದುಕೊಳ್ಳುವುದು; ಹಾಗೂ ಅದರ ಕಾರ್ಯವೈಖರಿ ತಿಳಿಯುವುದು, ಸಮಸ್ಯೆ ನಿವಾರಣೆ, ಸುರಕ್ಷತೆ, ಸಂಪರ್ಕ ಮತ್ತು ನಿರ್ವಹಣೆ
5. **ಶಿಕ್ಷಣದಲ್ಲಿನ ಸಾಧ್ಯತೆಗಳು:** ಆನ್‌ಲೈನ್ ಸಂಪನ್ಮೂಲ, ಸಂವಹನ, ಶಿಕ್ಷಣದ ಗುರಿ ಜೋಡಣೆ, ವಿಶ್ಲೇಷಣಾತ್ಮಕ ದೃಷ್ಟಿಕೋನ, ಅನ್ವೇಷಣೆ, ಪ್ರಯೋಗ ಹಾಗೂ ಆಡಳಿತಾತ್ಮಕ ಸಾಧನಗಳು ಇತ್ಯಾದಿ
6. **ತಲುಪುವುದು ಹಾಗೂ ಪರಸ್ಪರ ಅಂತರ ಕಡಿಮೆ ಮಾಡುವುದು:** ಭಾಷೆ, ದೃಶ್ಯ ಹಾಗೂ ಶ್ರವಣ ಸಂಬಂಧಿ ವಿಷಯಗಳಲ್ಲಿ ಸಮನ್ವಯ ಸಾಧಿಸುವುದು; ಡಿಜಿಟಲ್ ಸಮುದಾಯಗಳು, ವಿಕಿ ಜ್ಞಾನ ಇತ್ಯಾದಿ.

ಶಿಕ್ಷಣದಲ್ಲಿ ಐಸಿಟಿ ಸಲುವಾಗಿ ರೂಪಿಸಲಾದ ಪಠ್ಯಕ್ರಮವು ಆಶೋತ್ತರಗಳನ್ನು ಪ್ರತಿನಿಧಿಸುತ್ತದೆ. ನಿಮ್ಮ ಐಸಿಟಿ ಕಾರ್ಯತಂತ್ರವು ಇದನ್ನು ಗಮನದಲ್ಲಿ ಇಟ್ಟುಕೊಂಡಿರಬೇಕು ಹಾಗೂ ನಿಮ್ಮ ಶಾಲೆಯಲ್ಲಿನ ಪ್ರಸ್ತುತ ಸ್ಥಿತಿಯನ್ನು ಪ್ರತಿಬಿಂಬಿಸುವಂತಿರಬೇಕು. ಈ ಘಟಕದಲ್ಲಿನ ಚಟುವಟಿಕೆಗಳು ಐಸಿಟಿ ಕೌಶಲದ ಮಟ್ಟವನ್ನು ತೋರಿಸುತ್ತವೆ ಹಾಗೂ ಐಸಿಟಿಯು ವೃತ್ತಿಪರತೆ ಅಭಿವೃದ್ಧಿ ಮತ್ತು ಶಾಲಾಕೊಠಡಿಗಳಲ್ಲಿ ಕಲಿಕೆಗೆ ಉತ್ತೇಜನ ನೀಡುವಂತಿರುತ್ತದೆ. ನಿಮ್ಮ ಕಾರ್ಯತಂತ್ರವನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ನೆರವಾಗುವ ಒಬ್ಬರು ಅಥವಾ ಇಬ್ಬರು ಐಸಿಟಿ ಚಾಂಪಿಯನ್‌ಗಳನ್ನು ನೀವು ಗುರುತಿಸಿರಬಹುದು ಎಂದು ಆಶಿಸಿದ್ದೇವೆ.

ನಿಮ್ಮ ಐಸಿಟಿ ಕಾರ್ಯತಂತ್ರದಲ್ಲಿ ನೀವು ನೆನಪಿನಲ್ಲಿ ಇಡಬೇಕಾದ್ದು ಇವು:

- ನಿಮ್ಮ ಶಿಕ್ಷಕರ ಆತ್ಮವಿಶ್ವಾಸ ವೃದ್ಧಿಸಿ.
- ನಿಮ್ಮ ಶಾಲೆಗಳ ತರಗತಿಗಳಲ್ಲಿ ಕಲಿಕೆ ಹಾಗೂ ಬೋಧನೆಗೆ ಐಸಿಟಿ ಸಹಾಯ ಮಾಡಬಹುದಾದ ದಾರಿಗಳನ್ನು ಗುರುತಿಸಿ.
- ಶಿಕ್ಷಕರ ಬಳಿಯಲ್ಲಿ ಈಗಾಗಲೇ ಇರುವ ತಂತ್ರಜ್ಞಾನದ ಲಭ್ಯತೆ ಹಾಗೂ ಉನ್ನತ ಮೌಲ್ಯಗಳನ್ನು ಗಮನಿಸಿ, ಸುಧಾರಿಸಲು ಯತ್ನಿಸಿ. ಇದರಿಂದ ಹೆಚ್ಚು ಜನರ ಮೇಲೆ ಪ್ರಭಾವ ಬೀರಬಹುದಾಗಿದೆ.

### ಚಟುವಟಿಕೆ 8 : ಐಸಿಟಿ ಕಾರ್ಯತಂತ್ರ ರಚನೆ

ನಿಮ್ಮ ಐಸಿಟಿ ಚಾಂಪಿಯನ್‌ಗಳ ಜತೆ ಕೆಲಸ ಮಾಡುವಾಗ, ಅಧ್ಯಯನಗಳನ್ನು ಮತ್ತೊಮ್ಮೆ ಪರಿಶೀಲಿಸಿ ಹಾಗೂ ಚಟುವಟಿಕೆ ಆಧರಿಸಿದ ಟಿಪ್ಪಣಿಗಳನ್ನು ಗಮನಿಸಿ. ಬಳಿಕ ನಿಮ್ಮ ಕಾರ್ಯತಂತ್ರದ ಪ್ರತಿಯೊಂದು ಅಂಶದ ಬಗ್ಗೆ ಕ್ರಿಯಾಯೋಜನೆ ರೂಪಿಸಿಕೊಳ್ಳಿ

ಸರ್ಕಾರದಿಂದ ನಿಗದಿಪಡಿಸಲಾದ ಆಶೋತ್ತರಗಳನ್ನು ತಲುಪುವ ನಿಟ್ಟಿನಲ್ಲಿ ನಿಮ್ಮ ಶಾಲೆಯು ಸಾಧಿಸಬೇಕಾದ ಕ್ರಿಯೆಗಳನ್ನು ಗುರುತಿಸಲು ಶಿಕ್ಷಣದಲ್ಲಿ ಐಸಿಟಿ ಪಠ್ಯಕ್ರಮಗಳನ್ನು ಮತ್ತೊಮ್ಮೆ ಗಮನಿಸಿ.

# 6 ಸಾರಾಂಶ

ಭವಿಷ್ಯದ ದಿನಗಳಲ್ಲಿ ಅಂತರ್ಜಾಲ ಹಾಗೂ ಅತ್ಯಾಧುನಿಕ ಸಾಧನಗಳು ಎಲ್ಲರ ಕೈಗೆಟಕುವಂಥ ಪರಿಸ್ಥಿತಿ ಬರಲಿದೆ. ಶಾಲೆಯ ನಾಯಕರಾಗಿ, ಈ ತ್ವರಿತ ಹಾಗೂ ಸಂಕೀರ್ಣ ಜಗತ್ತಿಗೆ ಮಕ್ಕಳನ್ನು ಸಿದ್ಧಗೊಳಿಸಲು ತಯಾರಾಗಬೇಕಿದೆ. ಶಾಲೆಯಲ್ಲಿ ಇದ್ದಾಗಲೇ ಅವರಿಗೆ ಅತ್ಯಾಧುನಿಕ ತಂತ್ರಜ್ಞಾನ ಸಿಕ್ಕರೆ, ಅವರ ಭವಿಷ್ಯದ ದಿನಗಳು ಆಶಾದಾಯಕ ಆಗಿರಲಿವೆ. ಶಾಲೆಗಳಲ್ಲಿ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ (ಐಸಿಟಿ) ರಾಷ್ಟ್ರೀಯ ನೀತಿ– 2012 ಹೇಳುವಂತೆ, 'ಜ್ಞಾನದ ಸಮಾಜದಲ್ಲಿ ಯುವಕರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿದರೆ, ಅದರಿಂದ ದೇಶದಲ್ಲಿ ಸಮಾಜ ಆರ್ಥಿಕ ಅಭಿವೃದ್ಧಿ ಸಾಧಿಸಬಹುದು'.

ಈ ಘಟಕದ ಮುಖ್ಯ ಗುರಿಯೆಂದರೆ, ಸಂಪೂರ್ಣ ಸುಸಜ್ಜಿತವದ ಕಂಪ್ಯೂಟರ್ ಸೌಲಭ್ಯವನ್ನು ಮಾತ್ರ ಐಸಿಟಿ ಅಡಿ ನೀಡುವುದೊಂದೇ ಅಲ್ಲ, ನಿಮ್ಮ ಶಾಲೆಗಳಲ್ಲಿ ಐಸಿಟಿ ಸಂಪನ್ಮೂಲಗಳನ್ನು ನೀವೇ ವೃದ್ಧಿಸಿಕೊಳ್ಳಬಹುದು ಎಂಬ ದಾರಿಗಳನ್ನು ತೋರಿಸುವುದೂ ಆಗಿದೆ.

ನಿಮ್ಮ ಐಸಿಟಿ ಕಾರ್ಯತಂತ್ರವು ಬಹು ಮುಖ್ಯವಾಗಿ:

* ನಿಮ್ಮ ಶಿಕ್ಷಕರ ಕೌಶನ ಹಾಗೂ ಆತ್ಮವಿಶ್ವಾಸವನ್ನು ಗಣನೆಗೆ ತೆಗೆದುಕೊಳ್ಳುವುದು.
* ನೀವು ಸಾಧಿಸಬೇಕು ಎಂದಿರುವ ಶೈಕ್ಷಣಿಕ ಸಾಧನೆಯನ್ನು ಸಾಧಿಸುವುದು.
* ಎದುರಾಗುವ ಅವಕಾಶಗಳನ್ನು (ಉದಾಹರಣೆಗೆ ದೇಣಿಗೆ, ಕೊಡುಗೆ) ಬಳಸಿಕೊಳ್ಳುವ ಸಾಮರ್ಥ್ಯ ಬೆಳೆಸುವುದು

ಬೋಧನಾ– ಕಲಿಕೆ ಪ್ರಕ್ರಿಯೆಯನ್ನು ಪರಿವರ್ತಿಸುವಂಥ ಮಹತ್ವದ ಘಟ್ಟದ ಒಂದು ಭಾಗ ಇದು (ನ್ಯಾಷನಲ್ ಕಾಲೇಜ್ ಆಫ್ ಸ್ಕೂಲ್‌ಲೀಡರ್‌ಶಿಪ್‌ಗೆ ಸಂಯೋಜಿತ). ನಿಮ್ಮ ಕೌಶಲ ಹಾಗೂ ಜ್ಞಾನವನ್ನು ಇತರ ಘಟಕಗಳು ಬಳಸಿಕೊಳ್ಳಲು ಉಪಯೋಗ ಆಗಬಹುದು.

* ಪ್ರಾಥಮಿಕ ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಯನ್ನು ಸುಧಾರಿಸುವುದು
* ಪ್ರೌಢ ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಯನ್ನು ಸುಧಾರಿಸುವುದು
* ನಿಮ್ಮ ಶಾಲೆಯ ಪುನರ್ ಮೌಲ್ಯಮಾಪನ ಮಾಡುವುದು
* ಶಿಕ್ಷಕರ ಕಾರ್ಯಕ್ಷಮತೆ ಹೆಚ್ಚಿಸಲು ನೆರವಾಗುವುದು
* ಶಿಕ್ಷಕರ ವೃತ್ತಿಪರತೆಯನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಮುಂದಾಗುವುದು
* ಮಾರ್ಗದರ್ಶನ ಹಾಗೂ ತರಬೇತಿ
* ನಿಮ್ಮ ಶಾಲೆಯಲ್ಲಿ ಪರಿಣಾಮಕಾರಿಯಾದ ಕಲಿಕಾ ಸಂಸ್ಕೃತಿಯನ್ನು ರೂಪಿಸುವುದು
* ನಿಮ್ಮ ಶಾಲೆಯಲ್ಲಿ ಸಮನ್ವಯ ಉತ್ತೇಜಿಸುವುದು
* ವಿದ್ಯಾರ್ಥಿಗಳ ಪರಿಣಾಮಕಾರಿ ಕಲಿಕೆಗೆ ಸಂಪನ್ಮೂಲಗಳನ್ನು ನಿರ್ವಹಿಸುವುದು

# ಸಂಪನ್ಮೂಲಗಳು

## ಸಂಪನ್ಮೂಲ 1: ಶಿಕ್ಷಕರು ಹಾಗೂ ತಂತ್ರಜ್ಞಾನ

ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಗೆ ತಂತ್ರಜ್ಞಾನವನ್ನು ಹೇಗೆ ಬಳಸಬಹುದು ಎಂಬುದನ್ನು ಅರಿಯಲು ಶಿಕ್ಷಕರ ಜ್ಞಾನ ಹಾಗೂ ಕೌಶಲ ಗುರುತಿಸುವ ಈ ಪ್ರಶ್ನಾವಳಿಯಿಂದ ಶಾಲೆಯ ಮುಖಂಡರು ತಿಳಿದುಕೊಳ್ಳಬಹುದು.

ಪ್ರಸ್ತುತ ಶಾಲೆಯೊಳಗೆ ಹಾಗೂ ಹೊರಗೆ ಯಾವ ತರಹದ ತಂತ್ರಜ್ಞಾನವನ್ನು ಬಳಸುತ್ತಿದ್ದೀರಿ ಎಂಬುದನ್ನು ಪಟ್ಟಿ ಆರ್1.1ರಲ್ಲಿ ಸೂಚಿಸಿ.

**ಪಟ್ಟಿ ಆರ್1.1 ನಿಮ್ಮ ಶಿಕ್ಷಕರು ಶಾಲೆಯ ಒಳಗೆ ಹಾಗೂ ಹೊರಗೆ ಬಳಸುವ ತಂತ್ರಜ್ಞಾನ**

| ತಂತ್ರಜ್ಞಾನ | ಇದನ್ನು ಶಾಲೆಯ ಹೊರಗೆ ಬಳಸುತ್ತೀರಾ? | 1ರಿಂದ 5ರ ಪ್ರಮಾಣದಲ್ಲಿ, ಈ ಸಾಧನವನ್ನು ನೀವು ಎಷ್ಟು ವಿಶ್ವಾಸದಿಂದ ಬಳಸುತ್ತೀರಿ? 1= ಬಳಸುವುದೇ ಇಲ್ಲ ಹಾಗೂ 5–ಆತ್ಮವಿಶ್ವಾಸದಿಂದ ಬಳಸುತ್ತೇನೆ | ನಿಮ್ಮ ತರಗತಿಗಳಲ್ಲಿ ಬಳಸುತ್ತೀರಾ? |
|---|---|---|---|
| ಡೆಸ್ಕ್ ಟಾಪ್ ಕಂಪ್ಯೂಟರ್ | | | |
| ಲ್ಯಾಪ್‌ಟಾಪ್ | | | |
| ಅಂತರ್ಜಾಲ ಸಂಪರ್ಕ | | | |
| ಸಾಧಾರಣ ಮೊಬೈಲ್ ಫೋನ್ (ಕ್ಯಾಲ್ಕುಲೇಟರ್, ಧ್ವನಿಮುದ್ರಣ ಹಾಗೂ ಕ್ಯಾಮೆರಾಸಹಿತ) | | | |
| ಸ್ಮಾರ್ಟ್ ಫೋನ್ (ಅಂತಜಾಲಸಹಿತ) | | | |
| ಟ್ಯಾಬ್ಲೆಟ್ | | | |
| ಇಮೇಲ್, | | | |
| ಸಾಮಾಜಿಕ ಜಾಲ ತಾಣ (ಟ್ವಿಟ್ಟರ್, ಫೇಸ್‌ಬುಕ್) | | | |
| ಪ್ರೊಜೆಕ್ಟರ್ / ಸ್ಕ್ರೀನ್ | | | |
| ಧ್ವನಿವರ್ಧಕಗಳು | | | |
| ಮುದ್ರಣ ಯಂತ್ರ (ಪ್ರಿಂಟರ್ಸ್) | | | |
| ಡಿಜಿಟಲ್ ಕ್ಯಾಮೆರಾ (ಫೋನ್ ಅಥವಾ ಟ್ಯಾಬ್ಲೆಟ್‌ಗೆ ಸಂಯೋಜನೆ ಆಗಿರುವುದು) | | | |
| ಸಿಡಿ/ ಟೇಪ್ ಪ್ಲೇಯರ್ | | | |
| ಟೆಲಿವಿಜ಼ನ್ / ಡಿವಿಡಿ ಪ್ಲೇಯರ್ | | | |
| ರೇಡಿಯೊ | | | |

1. ನಿಮ್ಮಲ್ಲಿ ಇರುವ ಅಥವಾ ಕಲಿಯಲು ಆಸಕ್ತಿಯುರುವ ಕೌಶಲ ಯಾವುದು? ನಿಮ್ಮ ಉತ್ತರಗಳನ್ನು ಪಟ್ಟಿ ಆರ್1.2ರಲ್ಲಿ ಕೊಡಿ.

**ಪಟ್ಟಿ ಆರ್1.2 ಕಂಪ್ಯೂಟರ್ ಕೌಶಲದ ಮಾಪನ**

| ಕಂಪ್ಯೂಟರ್ ಕೌಶಲ | ನಾನು ಇದನ್ನು ಮಾಡಬಲ್ಲೆ | ಇದನ್ನು ಹೇಗೆ ಮಾಡಬೇಕು ಎಂಬುದನ್ನು ಕಲಿಯಲು ಕುತೂಹಲ ಇದೆ |
|---|---|---|
| ಮೌಸ್ ಆಪರೇಟ್ ಮಾಡುವುದು | | |
| ಕಡತಗಳನ್ನು ತೆರೆಯುವುದು ಹಾಗೂ ಉಳಿಸುವುದು ಮತ್ತು ಫೋಲ್ಡರ್‌ಗಳನ್ನು ರಚಿಸುವುದು | | |
| ವರ್ಡ್ ಪ್ರೊಸೆಸಿಂಗ್ | | |
| ಕಂಪ್ಯೂಟರ್‌ನಲ್ಲಿ ನೀವು ಮಾಡಿರುವ ಕಡತಗಳನ್ನು ಮುದ್ರಿಸುವುದು | | |
| ಪ್ರೆಸೆಂಟೇಶನ್ ಸಿದ್ಧಪಡಿಸುವುದು | | |
| ಸ್ಪ್ರೆಡ್ ಶೀಟ್ ಬಳಕೆ ಮಾಡುವುದು | | |
| ಅಂತರ್ಜಾಲದಲ್ಲಿ ಹುಡುಕುವುದು | | |
| ಅಂತರ್ಜಾಲದಿಂದ ಸಾಮಗ್ರಿಯನ್ನು ಇಳಿಸಿಕೊಳ್ಳುವುದು (ಡೌನ್‌ಲೋಡ್) | | |
| ಸಿ.ಡಿ.ಯನ್ನು ಕಂಪ್ಯೂಟರಿನಲ್ಲಿ ಹಾಕಿ, ಅದರಲ್ಲಿನ ಮಾಹಿತಿಯನ್ನು ಸಂಗ್ರಹಿಸುವುದು | | |
| ಮೆಮೊರಿ ಕಾರ್ಡ್‌ನಲ್ಲಿರುವ ಕಡತಗಳನ್ನು ನೋಡುವುದು ಹಾಗೂ ಕಡತ ಉಳಿಸುವುದು | | |
| ಕಂಪ್ಯೂಟರ್ ಜತೆ ಧ್ವನಿವರ್ಧಕ ಹಾಗೂ ಪ್ರೊಜೆಕ್ಟರ್ ಜೋಡಿಸುವುದು | | |
| ಮೊಬೈಲ್ ಫೋನ್ ಅಥವಾ ಟ್ಯಾಬ್ಲೆಟ್‌ನಿಂದ ಫೋಟೋ ತೆಗೆಯುವುದು | | |
| ಡಿಜಿಟಲ್ ಕ್ಯಾಮೆರಾದಿಂದ ಫೋಟೋ ತೆಗೆದು, ಕಂಪ್ಯೂಟರಿನಲ್ಲಿ ಸಂಗ್ರಹಿಸುವುದು | | |
| ಇಮೇಲ್ ಕಳಿಸುವುದು ಹಾಗೂ ಸ್ವೀಕರಿಸುವುದು | | |
| ಕಡತದ ಜತೆಗೆ ಇಮೇಲ್ ರವಾನಿಸುವುದು | | |
| ಟ್ವಿಟ್ಟರ್ ಹಾಗೂ ಫೇಸ್‌ಬುಕ್ ಬಳಕೆ | | |
| ಅಂತರ್ಜಾಲದಿಂದ ಸಾಮಗ್ರಿ ಖರೀದಿ | | |
| ಯೂಟ್ಯೂಬ್‌ನಲ್ಲಿ ಸಿನಿಮಾದ ತುಣುಕುಗಳನ್ನು ವೀಕ್ಷಿಸುವುದು | | |
| ಯೂಟ್ಯೂಬ್‌ನಲ್ಲಿ ಸಿನಿಮಾವನ್ನು ಅಪ್ಲೋಡ್ ಮಾಡುವುದು | | |
| ಕಂಪ್ಯೂಟರ್‌ನಿಂದ ಕಡತವೊಂದನ್ನು ಸ್ಕ್ಯಾನ್ ಮಾಡುವುದು | | |
| ಲ್ಯಾಪ್‌ಟಾಪ್‌ನಲ್ಲಿ ಡಿವಿಡಿ ವೀಕ್ಷಿಸುವುದು | | |

2. ಈ ಶಾಲೆಯಲ್ಲಿ ಶಿಕ್ಷಕರಾಗಿರುವ ನೀವು, ನಿತ್ಯ ಜೀವನದಲ್ಲಿ ಎದುರಿಸುವ ಮೂರು ಅತಿ ದೊಡ್ಡ ಸವಾಲುಗಳನ್ನು ಪಟ್ಟಿ ಮಾಡಿ.

# ಸಂಪನ್ಮೂಲ 2: ಸಾಮಾನ್ಯ ಸವಾಲುಗಳಿಗೆ ತಂತ್ರಜ್ಞಾನದ ಪರಿಹಾರಗಳು

ಶಿಕ್ಷಕರು ತಾವು ಎದುರಿಸುವುದಾಗಿ ಹೇಳುವ ಸಾಮಾನ್ಯ ಸವಾಲುಗಳು:

- ನನಗೆ ದೊಡ್ಡ ಕ್ಲಾಸ್ ಇದೆ
- ಪಠ್ಯಕ್ರಮವನ್ನು ಮುಗಿಸಲು ಪ್ರಯತ್ನಿಸುತ್ತಿದ್ದೇನೆ
- ವಿದ್ಯಾರ್ಥಿಗಳಿಗೆ ಆಸಕ್ತಿಯೇ ಇಲ್ಲ
- ಈ ಕೆಲಸ ಮಾಡಲು ವಿದ್ಯಾರ್ಥಿಗಳು ಹೆಚ್ಚು ಶ್ರಮಿಸುವುದಿಲ್ಲ
- ಸಾಕಷ್ಟು ಸಂಪನ್ಮೂಲಗಳು ನನಗೆ ಸಿಗುತ್ತಿಲ್ಲ
- ಪಠ್ಯಕ್ರಮದಲ್ಲಿ ಇರುವ ಕೆಲವು ವಿಷಯಗಳನ್ನು ಬೋಧಿಸಲು ನನಗೆ ವಿಶ್ವಾಸ ಸಾಲುತ್ತಿಲ್ಲ
- ವಿದ್ಯಾರ್ಥಿಗಳ ವರ್ತನೆ ಕೆಟ್ಟದ್ದಾಗಿದೆ
- ಸಹಭಾಗಿತ್ವದಲ್ಲಿ ಕಲಿಸಲು ನಾನು ಯತ್ನಿಸುತ್ತೇನೆ. ಆದರೆ ವಿದ್ಯಾರ್ಥಿಗಳು ಮಾತಾಡಲು ಹಿಂಜರಿಯುತ್ತಾರೆ ಅಥವಾ ಪ್ರಶ್ನೆ ಕೇಳುವುದೇ ಇಲ್ಲ
- ಹಾಜರಾತಿ ತುಂಬ ಕಡಿಮೆ ಇರುತ್ತದೆ. ಹೀಗಾಗಿ ಪಠ್ಯವನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳುವುದೇ ಇಲ್ಲ. ಆ ಬಳಿಕ ಅದು ಅವರಿಗೆ ತುಂಬ ಕಠಿಣ ಅನಿಸುತ್ತದೆ
- ನನ್ನ ವಿದ್ಯಾರ್ಥಿಗಳ ಬದುಕಿಗೆ ಸೂಕ್ತವಾಗುವಂತೆ ಪಠ್ಯಕ್ರಮವೇ ಇಲ್ಲ
- ಸಹಭಾಗಿತ್ವದ ವಿಧಾನ ಅಳವಡಿಸಿಕೊಳ್ಳಲು ನನಗೆ ಸೂಚಿಸಲಾಯಿತು; ಆದರೆ ತರಗತಿಯ ಪ್ರಮಾಣ ಹಾಗೂ ಪಠ್ಯಕ್ರಮ ಸಾಕಷ್ಟು ದೊಡ್ಡದು ಆಗಿರುವುದರಿಂದ ಅದು ಅಸಾಧ್ಯವಾಗಿದೆ.

ಈ ಎಲ್ಲದರ ಪೈಕಿ ಬಹುತೇಕ ಸವಾಲುಗಳನ್ನು ತಂತ್ರಜ್ಞಾನದ ಮೂಲಕ ಎದುರಿಸಬಹುದು. ಒಂದು ಲ್ಯಾಪ್‌ಟಾಪ್ ಅನ್ನು ಅಂತರ್ಜಾಲಕ್ಕೆ ಸಂಪರ್ಕಿಸಿ, ಅಗತ್ಯ ಸಾಮಗ್ರಿ ಡೌನ್‌ಲೋಡ್ ಮಾಡಿಕೊಂಡು, ಅದಕ್ಕೆ ಪ್ರೊಜೆಕ್ಟರ್ ಜೋಡಿಸಿಕೊಂಡ ಶಿಕ್ಷಕರು:

- ಹೊಸ ಹೊಸ ಆಸಕ್ತಿಕರ ವಿಷಯಗಳ ಕುರಿತು ಪರಿಚಯ ಮಾಡಿಕೊಡಬಹುದು
- ಸಂಕೀರ್ಣವೆನಿಸುವ ವಿಷಯಗಳನ್ನು ಸುಲಭವಾಗಿ ಹೇಳಿಕೊಡಬಹುದು
- ವಾಸ್ತವ ಜಗತ್ತು ಹಾಗೂ ಪಠ್ಯಕ್ರಮವನ್ನು ಜೋಡಿಸಬಹುದು

ವಿವಾದವೊಂದರ ಎರಡೂ ಮಗ್ಗಲುಗಳನ್ನು ಮಂಡಿಸುವುದರ ಮೂಲಕ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಚರ್ಚೆ ಆರಂಭಿಸಿ, ವಾದ– ವಿವಾದ ನಡೆಯುವಂತೆ ಮಾಡಬಹುದು. ಪಠ್ಯಕ್ರಮಕ್ಕೆ ಪೂರಕವಾಗಿರುವ ಅಪ್ಲಿಕೇಶನ್‌ಗಳನ್ನು ಟ್ಯಾಬ್ಲೆಟ್‌ನಲ್ಲಿ ಅಡಕಗೊಳಿಸಿ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಬಳಸಿಕೊಳ್ಳಬಹುದು. ಸಂಶೋಧನೆಯನ್ನು ನಿರ್ವಹಿಸಲು ಹಾಗೂ ವಿಷಯ ಮಂಡನೆಗೆ ಕಂಪ್ಯೂಟರ್ ಬಳಕೆ ಮಾಡುವುದರಿಂದ ವಿದ್ಯಾರ್ಥಿಗಳು ತಮ್ಮ ಕಲಿಕೆ ಬಗ್ಗೆ ತಾವೇ ನಿರ್ಧಾರ ತೆಗೆದುಕೊಳ್ಳಲು ಪ್ರೇರೇಪಣೆ ನೀಡುವಂತಾಗುತ್ತದೆ.

# ಸಂಪನ್ಮೂಲ 3: ಮುಕ್ತ ಶೈಕ್ಷಣಿಕ ಸಂಪನ್ಮೂಲ (ಒಇಆರ್) ಸಾಧ್ಯತೆ ಆವಿಷ್ಕರಿಸುವುದು

ಒಇಆರ್ ಒಳಗೊಂಡಿರುವ ವೆಬ್‌ಸೈಟ್‌ಗಳ ಪಟ್ಟಿ ಇಲ್ಲಿದೆ:

- ನ್ಯಾಷನ್ ರೆಪೊಸಿಟರಿ ಆಫ್ ಒಪನ್ ಎಜುಕೇಶನಲ್ ರಿಸೋರ್ಸಸ್: http://nroer.gov.in/home/
- ಟಿಇಎಸ್‌ಎಸ್– ಇಂಡಿಯಾ: http://www.tess-india.edu.in/
- ಎಕ್ಸಾಮ್ ಫಿಯರ್ ವಿಡಿಯೋಸ್: https://www.youtube.com/user/ExamFearVideos
- ಖಾನ್ ಅಕಾಡೆಮಿ: https://www.khanacademy.org/
- ದಿ ಒಪನ್ ಸೈನ್ಸ್ ಲ್ಯಾಬೊರೇಟರಿ: http://www.open.ac.uk/researchprojects/open-science/
- ಒಪನ್ ಲರ್ನ್: http://www.open.edu/openlearn/
- ಪಿಎಚ್‌ಇಟಿ ಸಿಮ್ಯುಲೇಶನ್ಸ್: https://phet.colorado.edu/en/simulations/category/new
- ಕರ್ನಾಟಕ ಒಪನ್ ಎಜುಕೇಶನಲ್ ರಿಸೋರ್ಸಸ್: http://karnatakaeducation.org.in/KOER/en/index.php/Main_Page

ಸಾಮಗ್ರಿಗಳ ಗುಣಮಟ್ಟ ಖಚಿತಪಡಿಸಿಕೊಳ್ಳಲು ಅನುಸರಿಸಬೇಕಾದ ಮಾನದಂಡಗಳ ಪಟ್ಟಿ ಇಲ್ಲಿದೆ:

ನಿಮ್ಮ ಅಗತ್ಯಕ್ಕೆ ಪ್ರಸ್ತುತ ಅನಿಸುವಂತೆ ಈ ಸಾಮಗ್ರಿ ಇವೆಯೇ?

* ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಉತ್ತೇಜನ ಕೊಡುವಂತೆ ಇವೆಯೇ?

* ನಿಮ್ಮ ಶಾಲೆಯ ಅಗತ್ಯಗಳನ್ನು ಗುರುತಿಸಿ, ಸಮಸ್ಯೆ ನಿವಾರಿಸಬಲ್ಲವೇ?

* ಅವುಗಳನ್ನು ಚೆನ್ನಾಗಿ ಬರೆಯಲಾಗಿದೆಯೇ ಹಾಗೂ ತಿಳಿದುಕೊಳ್ಳಲು ಸುಲಭವಾಗುವಂತೆ ಇವೆಯೇ?

* ಮೌಲ್ಯಗಳನ್ನು ಅವು ಒಳಗೊಂಡಿವೆಯೇ? ಪಠ್ಯಪುಸ್ತಕದ ಆಚೆಗೆ ಕಲಿಕೆಯ ಅವಕಾಶಗಳನ್ನು ಅವು ನೀಡಬಲ್ಲವೇ?

## ಸಂಪನ್ಮೂಲ 4: ನಿರ್ವಹಣೆ ಹಾಗೂ ಸಹಕಾರ

ನಿರ್ವಹಣೆ ಮತ್ತು ಸಹಕಾರ ಎರಡೂ ನಿರಂತರವಾಗಿ ನಡೆಯುತ್ತಿರುತ್ತವೆ. ಇರುವ ಸಿಬ್ಬಂದಿಯ ಪೈಕಿ ಕೌಶಲ ಹಾಗೂ ಜ್ಞಾನ ಹೊಂದಿರುವ ಒಬ್ಬರಿಗೆ ಈ ಹೊಣೆಯನ್ನು ವಹಿಸಬೇಕು; ಇದಕ್ಕೆ ಪರ್ಯಾಯವಾಗಿ ಈ ಸೇವೆಗಳನ್ನು ಖರೀದಿಸಬಹುದು ಅಥವಾ ಸ್ವಯಂಸೇವಕರು ಮುಂದೆ ಬಂದರೆ ಬಳಸಿಕೊಳ್ಳಬಹುದು.

ಶಾಲಾ ವ್ಯವಸ್ಥೆಯ ಒಂದು ಭಾಗವಾಗಿರುವ ಜನರಿಂದ ನಿರ್ವಹಣಾ ಪ್ರಕ್ರಿಯೆಯನ್ನು ಪೂರೈಸಿಕೊಳ್ಳಬಹುದು ಅಥವಾ ಅದಕ್ಕೆ ಹಣ ವೆಚ್ಚ ಮಾಡಿ ನಡೆಸಬಹುದು. ಸಾಧನಗಳು ಅಥವಾ ಅಪ್ಲಿಕೇಶನ್‌ಗಳ ಬಳಕೆಯಲ್ಲಿ ಉಸ್ತುವಾರಿ ನಡೆಸುವುದು ಇದರಲ್ಲಿ ಸೇರಿರುತ್ತದೆ. ನಿರ್ದಿಷ್ಟವಾದ ನಿರ್ವಹಣೆಯು ಇವುಗಳನ್ನು ಒಳಗೊಂಡಿರುತ್ತದೆ:

* ಬಳಕೆಯಾಗುವ ಸಾಮಗ್ರಿಗಳ ಭಾಗಗಳ ನಿಯಮಿತ ನವೀಕರಣ ಅಥವಾ ಬೇರೊಂದು ಭಾಗ ಸೇರ್ಪಡೆ

* ದೋಷಯುಕ್ತ ಭಾಗಗಳ ದುರಸ್ತಿ ಅಥವಾ ಬೇರೆ ಸಾಮಗ್ರಿ ಸೇರ್ಪಡೆ

* ಸಾಧನ– ಸಲಕರಣೆಗಳ ನಿಯಮಿತ ಪರಿಶೀಲನೆ

* ಯಂತ್ರಾಂಶ ಹಾಗೂ ತಂತ್ರಾಂಶಗಳನ್ನು ಮೇಲ್ದರ್ಜೆಗೇರಿಸುವುದು, ಅಗತ್ಯವಿದ್ದರೆ ಹೊಸ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸುವುದು

* ಘಟಕದಲ್ಲಿ ಅಗತ್ಯ ಅಂಶ ಸೇರ್ಪಡೆ ಹಾಗೂ ಬೇಡವೆನಿಸುವ ಅಂಶಗಳನ್ನು ತೆಗೆಯುವುದು, ಬಳಕೆದಾರರ ಹಕ್ಕು ಪರಿಷ್ಕರಣೆ

* ಶಾಲೆಗಳ ಸಂಪರ್ಕ ಜಾಲದಲ್ಲಿ ಸಂಗ್ರಹಿಸಲಾದ ಕಡತಗಳನ್ನು ನಿಗದಿತವಾಗಿ ಪರಿಶೀಲನೆ ಮಾಡುವುದು

* ಉಪಕರಣಗಳು ಹಾಗೂ ಸಂಪರ್ಕ ಜಾಲದ ಕಾರ್ಯಕ್ಷಮತೆಯನ್ನು ಪರಿಶೀಲಿಸುವುದು

* ಉಪಕರಣಗಳು ಹಾಗೂ ಅಪ್ಲಿಕೇಶನ್‌ಗಳನ್ನು ಅಳವಡಿಸುವುದು ಹಾಗೂ ತೆಗೆದು ಹಾಕುವುದು

ಉಪಕರಣಗಳು ಹಾಗೂ ಘಟಕಗಳಿಗೆ ನೆರವು ನೀಡುವುದಕ್ಕಿಂತ ಬಳಕೆದಾರರ ಜತೆ ಕೆಲಸ ಮಾಡಲು ಐಸಿಟಿ ನೆರವು ನೀಡುತ್ತದೆ. ಈ ನೆರವು ಬಳಕೆದಾರರು ನಿರಂತರವಗಿ ಕೆಲಸ ಮಾಡಲು ಸಹಾಯಕವಾಗುತ್ತದೆ ಅಥವಾ ಅವರ ಕೆಲಸ ಸುಧಾರಿಸುವಂತೆ ಮಾಡುತ್ತದೆ. ಅದರ ಪೈಕಿ:

* ಸಹಾಯವಾಣಿ ಅಥವಾ ಸಮಸ್ಯೆ ಪರಿಹಾರಕ್ಕೆ ಇತರ ಸ್ವರೂಪಗಳು ಅಥವಾ ಸಲಹೆ ನೀಡುವುದು

* ಪ್ರಶ್ನೋತ್ತರ ಅಥವಾ ಮಾಹಿತಿಪತ್ರದಂಥ ಸ್ವಯಂಚಾಲಿತ ಮಾಹಿತಿ ನೀಡಿಕೆ ಘಟಕಗಳು

* ಆರಂಭಿಕ ಹಂತದ ತರಬೇತಿ ಮತ್ತು ಉಪಕರಣಗಳು ಹಾಗೂ ತಂತ್ರಾಂಶಗಳನ್ನು ಸುಲಭವಾಗಿ ಬಳಸುವಂತೆ ಮಾಡುವುದು

(ರಾಷ್ಟ್ರೀಯ ಶಿಕ್ಷಣ ಅಂಕಿ ಅಂಶಗಳ ಕೇಂದ್ರ– 2003ರಿಂದ ಪಡೆದ ಮಾಹಿತಿ)

# References/bibliography


Azim Premji Foundation (2005) ‘Local content development programme: experiences of three schools in Karnataka’ (online), November. Available from: http://www.azimpremjifoundation.org/pdf/LocalContent.pdf (accessed 7 January 2015).

Central Institute of Educational Technology (2013) *Curricula for ICT in Education*. New Delhi: National Council of Educational Research and Training. Available from:

http://www.ncert.nic.in/announcements/notices/pdf_files/ICT%20Curriculuma.pdf (accessed 8 January 2015).

Das, P. (undated) 'Open education resources and community development: exploring new pathways of knowledge in the field of higher education in Assam' (online), Commonwealth of Learning, Available from: http://www.col.org/pcf6/fp/zIN2310.doc (accessed 8 January 2015).

Department of School Education and Literacy (2012) *National Policy on ICT in School Education* (online). Available from: http://mhrd.gov.in/sites/upload_files/mhrd/files/upload_document/revised_policy%20document%20ofICT.pdf (accessed 8 January 2015).

Latchem, C. (2010) 'Using ICT to train teachers in ICT', in Danaher, P. and Umar, A. (eds) *Teacher Education through Open and Distance Learning*. Vancouver: Commonwealth for Learning.

National Center for Education Statistics (2003) 'Chapter 5: Maintenance and support', in *Technology in Schools: Suggestions, Tools, and Guidelines for Assessing Technology in Elementary and Secondary Education* (online). Available from: http://nces.ed.gov/pubs2003/tech_schools/chapter5.asp# (accessed 8 January 2015).

National Council of Educational Research and Training (NCERT) (2005) *National Curriculum Framework 2005* (NCF). New Delhi: National Council of Educational Research and Training. Available from: http://www.teindia.nic.in/files/ncf-2005.pdf (accessed 19 December 2014).

Steketee, C. (2005) 'Integrating ICT as an integral teaching and learning tool into pre-service teacher training courses', *Issues in Educational Research*, vol. 15, no. 1, pp. 101–13. Available from: http://www.iier.waier.org.au/iier15/steketee.html (accessed 8 January 2015).

TESS-India, http://www.tess-india.edu.in/ (accessed 6 January 2015).

UNESCO (undated) 'ICT in education: UNESCO ICT Competency Framework for Teachers' (online). Available from: http://www.unesco.org/new/en/unesco/themes/icts/teacher-education/unesco-ict-competency-framework-for-teachers/ (accessed 8 January 2015).

UNESCO Institute (undated) 'ICT in primary education' (online). Available from: http://iite.unesco.org/publications/themes/primary_ed/%20http://iite.unesco.org/publications/themes/secondary_ed/ (accessed 8 January 2015).

Ushahidi (2013) 'BRCK – your backup generator for the internet' (online), Kickstarter, 4 June. Available from: https://www.kickstarter.com/projects/1776324009/brck-your-backup-generator-for-the-internet (accessed 7 January 2015).

Venkatraman, V. (2012) 'Technology crafts for the digitally underserved' (online), TEDxSummit, Available from: http://www.ted.com/talks/vinay_venkatraman_technology_crafts_for_the_digitally_underserved (accessed 7 January 2015).

# Acknowledgements

Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.